# ಕನ್ನಡ
# KANNADA

## ತರಗತಿ

## I

## ಭಾಗ - 2

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2016

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2014, Reprint : 2016

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ-ವಿನಯದಿಂದ ಕೂಡಿದ ಮಾತು ಎಲ್ಲರನ್ನೂ ಸೆಳೆಯುತ್ತದೆ. ನಮ್ಮ ಮಾತು ಮತ್ತು ಕೃತಿಗಳು ನಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನಮ್ಮ ಕನ್ನಡ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕು. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ಚಿತ್ರಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಮ್ಮ ಭಾವನೆಗಳು ಮತ್ತು ಅನುಭವಗಳನ್ನು ಪ್ರಕಟಿಸಲು ಈ ಪಠ್ಯಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಪಠ್ಯಪುಸ್ತಕದಲ್ಲಿರುವ ಉತ್ತಮ ಮೌಲ್ಯಗಳು ಮತ್ತು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಿಮಗೆಲ್ಲರಿಗೂ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜೆ. ಪ್ರಸಾದ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

## KANNADA

## STANDARD I

Participants : Krishnoji Rao, G.H.S.S., Bellur
Mahalinga Bhat N., A.U.P.S., Dharmathadka
Radhakrishna M., G.V.H.S.S., Mulleria
Ravishankar K., G.J.B.S., Peral
Sathyanarayana Sharma, G.S.B.S. Kumbla
Srikumari K., A.U.P.S., Anekal
Umesha, S.N.H.S., Perla

Experts : Dr. Rathnakara Mallamoole, Asst. Professor, Govt. College, Kasaragod
Shridhara N., Asst. Professor, Govt. College, Kasaragod
Dr. Srikrishna Bhat, Rtd. Professor, Govt. College, Kasaragod

Artists : Madhusoodhanan K.V., G.H.S.S. South Thrikkaripur
Ravi Pilikode, B.A.R H.S.S. Bovikana
Shyam Sasi, Drawing Teacher, G.H.S. Kakkad

External Experts : Dr. Radhakrishna N., Asst. Professor, Govt. College, Kasaragod
Shivashankara P., Asst. Professor, GPM Govt. College, Manjeshwara

Academic Co-Ordinator

Dr. C. Bhamini, Research Officer, SCERT, Thiruvananthapuram

SCERT
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012






| ಕ್ರಮ ಸಂಖ್ಯೆ | ಘಟಕ | ಪುಟಸಂಖ್ಯೆ |
|---|---|---|
| 6. | ನಾವು ಗೆಳೆಯರು | 102 |
| 7. | ಮಣ್ಣು-ಹೊನ್ನು | 122 |
| 8. | ಫೋಂ... ಫೋಂ... | 142 |
| 9. | ಹಲೋ... ಹಲೋ... | 164 |
| 10. | ನಮ್ಮ ಸಹಾಯಕರು | 184 |




## ಪಾಠ – 6

# ನಾವು ಗೆಳೆಯರು



ಬುಳುಂಕ್... ಸದ್ದು ಕೇಳಿತು.

“ಅರೇ.... ಇದೇನು ಸದ್ದು?”

ಕೆರೆಯ ಬಳಿಯ ಮರದಲ್ಲಿದ್ದ

ಮಿಂಕು ಮಂಗ ಕೆಳಗೆ ನೋಡಿತು.

## ಹಾಡುವ



ಮಿನ್ನು ಅಳಿಲು ಕಾಲು ಜಾರಿ
ಕೆರೆಗೆ ಬಿದ್ದಿತು
ಮಿಂಕು ಮಂಗ ಇದನು ನೋಡಿ
ಬೊಬ್ಬೆ ಹಾಕಿತು
ಬೊಬ್ಬೆ ಕೇಳಿ ಕಪ್ಪೆ ಮೊಲವು
ಜಿಗಿದು ಬಂದುವು
ಕಾಗೆ ಗೂಬೆ ನವಿಲು ಗಿಳಿಯು
ಹಾರಿ ಬಂದುವು
ಜಿಂಕೆ ಜಿಗಿದು ಹುಲಿಯು ನೆಗೆದು
ಬೇಗ ಬಂದುವು
ಕರಡಿ ಕುದುರೆ ಚಿರತೆ ಸಿಂಹ
ಓಡಿ ಬಂದುವು
ಕೆರೆಯ ದಡದ ಸುತ್ತಮುತ್ತ
ಎಲ್ಲ ನೆರೆದುವು



## ಓದುವ

ಮಿನ್ನು ಅಳಿಲು ಕೆರೆಗೆ ಬಿತ್ತು.

ಮಿಂಕು ಮಂಗ ನೋಡಿತು.

ಮಿಂಕು ಕೂಗಿ ಕರೆಯಿತು.


ಎಲ್ಲರೂ ಬಂದರು.

## ಹೇಳುವ


- ಕೆರೆಯ ಬಳಿಗೆ ಯಾರು ಯಾರು ಬಂದರು?


## ಬರೆಯುವ

**ಚಿತ್ರಕ್ಕೆ ಬಣ್ಣ ಕೊಟ್ಟು ಜೀವಿಗಳ ಹೆಸರು ಬರೆಯಿ**









ಎಲ್ಲರೂ ಗಾಬರಿಯಿಂದ ಒಬ್ಬರನ್ನು ಒಬ್ಬರು ನೋಡಿದರು. ಮಿಂಕುವಿಗೆ ಒಂದು ಉಪಾಯ ಹೊಳೆಯಿತು. ಅದು ಕೆರೆಗೆ ಬಾಗಿದ ಗೆಲ್ಲಿನಲ್ಲಿ ಕುಳಿತಿತು. ತನ್ನ ಬಾಲವನ್ನು ನೀರಿಗೆ ಇಳಿಸಿತು. ಮಿಂಕುವಿನ ಬಾಲವನ್ನು ಹಿಡಿದುಕೊಂಡು ಮಿನ್ನು ಮೇಲೆ ಬಂತು.




## ಹೇಳುವ

- ಮಿಂಕು ಮಿನ್ನುವನ್ನು ಹೇಗೆ ರಕ್ಷಿಸಿತು?



## ಓದುವ

- ಗಾಬರಿ
- ಉಪಾಯ
- ಕೆರೆ
- ಬಾಲ
- ಗೆಲ್ಲು
- ಇಳಿಸು



ಆಹಾರ ಹುಡುಕಲು ಹೋದ ಅಮ್ಮ ಅಳಿಲು ಹಿಂತಿರುಗಿತು. “ಅಲ್ಲೇನು ಸದ್ದು?” ಅಮ್ಮ ಅಳಿಲು ಕೆರೆಯ ಬಳಿಗೆ ಹೋಯಿತು. ಮಿನ್ನುವನ್ನು ಕಂಡಿತು. “ಮಿನ್ನೂ....” ಅಮ್ಮ ಕರೆಯಿತು. ಮಿನ್ನು ಅಮ್ಮನ ಬಳಿಗೆ ಓಡಿ ಬಂದಿತು.




## ಬರೆಯುವ

ಅಮ್ಮ : ಏನಾಯಿತು ಮಿನ್ನೂ.....?

ಮಿನ್ನು : ................................................

ಅಮ್ಮ : ನೀನು ನೀರಿನಿಂದ ಹೇಗೆ ಮೇಲೆ ಬಂದೆ?

ಮಿನ್ನು : ................................................



“ಮಂಗಣ್ಣಾ.... ತುಂಬಾ ಉಪಕಾರ ಮಾಡಿದೆ. ಬರುತ್ತೇನೆ” ಎನ್ನುತ್ತಾ ಅಮ್ಮ ಅಳಿಲು ಮಿನ್ನುವಿನೊಂದಿಗೆ ಪೊಟರೆಗೆ ಹಿಂತಿರುಗಿತು. “ಅಮ್ಮಾ, ನನಗೆ ಇಲ್ಲಿ ಹೆದರಿಕೆಯಾಗುತ್ತದೆ. ನಾವು ಬೇರೆ ಕಡೆಗೆ ಹೋಗೋಣ” ಮಿನ್ನು ಹೇಳಿತು. “ಆಗಲಿ ಮಿನ್ನು”. ಅಮ್ಮ ಅಳಿಲು ಮಿನ್ನುವನ್ನು ಕರೆದುಕೊಂಡು ಕಾಡಿನಿಂದ ಹೊರಟಿತು. ದಾರಿಯಲ್ಲಿ ಅಳಿಲಿನ ಗೆಳೆಯ ರವಿ ಎದುರಾದನು. ಅವನು ಆಡಿನ ಮರಿ ಪಿಂಕುವನ್ನು ಮೇಯಿಸಲು ಹೊರಟಿದ್ದನು.



## ಹೇಳುವ

- ಅಮ್ಮ ಅಳಿಲು ಯಾಕೆ ಕಾಡಿನಿಂದ ಹೊರಟಿತು?
- ರವಿ ಎಲ್ಲಿಗೆ ಹೊರಟಿದ್ದನು?




## ಓದುವ

ರವಿ : ಅಳಿಲಕ್ಕಾ.. ಎಲ್ಲಿಗೆ ಹೊರಟೆ?

ಅಮ್ಮ ಅಳಿಲು : ನನಗೂ ನನ್ನ ಮರಿಗೂ ವಾಸಿಸಲು ಜಾಗ ಹುಡುಕುತ್ತಾ ಹೊರಟೆ.

ರವಿ : ನನ್ನೊಂದಿಗೆ ಬಾ. ನನ್ನ ಮನೆಯ ಬಳಿಯಲ್ಲಿರುವ ಮರದಲ್ಲಿ ಒಂದು ಪೊಟರೆ ಇದೆ. ನಿನಗೆ ಅಲ್ಲಿ ವಾಸಿಸಬಹುದು.





## ಬರೆಯುವ

**ಕೊಟ್ಟಿರುವ ಪದಗಳನ್ನು ಸೇರಿಸಿ ವಾಕ್ಯ ಬರೆಯಿರಿ.**

| | |
|---|---|
| ಗಾಬರಿಯಿಂದ | ಹೊಳೆಯಿತು |
| ಉಪಾಯ | ನೋಡಿದರು |
| ಬಾಲವನ್ನು | ಕುಳಿತಿತು |
| ಗೆಲ್ಲಿನಲ್ಲಿ | ಇಳಿಸಿತು |

ಗಾಬರಿಯಿಂದ ನೋಡಿದರು



## ಬರೆಯುವ

**ಅಡಿಗೆರೆ ಎಳೆದ ಪದದ ಬದಲಿಗೆ ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

ನಾನು ಹೆದರಿಕೆಯಾಗುತ್ತದೆ. (ನನಗೆ, ನನ್ನಲ್ಲಿ)

ನಾನು ಜೊತೆಯಲ್ಲಿ ಬಾ. (ನನ್ನ, ನನಗೆ)

ಮೊಲ ಮನೆಗೆ ಬಳಿಗೆ ಬಂತು. (ಮನೆಯ, ಮನೆಯಲ್ಲಿ)

ಅಮ್ಮ ಅಳಿಲು ಮತ್ತು ಮಿನ್ನು ರವಿಯೊಂದಿಗೆ ಮನೆಗೆ ಬಂದರು. ಜಿಮ್ಮಿ ಬೌ ಬೌ ಎನ್ನುತ್ತಾ ಹತ್ತಿರ ಬಂತು. ಅಂಬಾ ಎನ್ನುತ್ತಾ ಗಂಗೆ ಜಿಗಿಯುತ್ತಾ ಬಂತು. ಮಿಯಾಂವ್ ಎನ್ನುತ್ತಾ ಬಿಲ್ಲಿಯೂ ಬಂತು. ಮಿನ್ನುವಿಗೆ ಹೆದರಿಕೆಯಾಯಿತು. ಅದು ಅಮ್ಮನ ಹಿಂದೆ ಅಡಗಿತು. “ಹೆದರಬೇಡ ಮಿನ್ನು. ಇವರೆಲ್ಲ ನನ್ನ ಗೆಳೆಯರು.” ರವಿ ಹೇಳಿದನು.



## ಹೇಳುವ

- ನಿಮ್ಮ ಮನೆಯಲ್ಲಿ ಯಾವ ಯಾವ ಸಾಕುಪ್ರಾಣಿಗಳಿವೆ?





## ಓದುವ ಅಭಿನಯಿಸುವ

**ಕೊಟ್ಟಿರುವ ಪ್ರಾಣಿಗಳ ಕೂಗನ್ನು ಅನುಕರಣೆ ಮಾಡಿ ಅಭಿನಯಿಸಿರಿ.**

| | | |
|---|---|---|
| ಕರು | - | ಅಂಬಾ ಅಂಬಾ |
| ನಾಯಿ | - | ಬೌ ಬೌ |
| ಬೆಕ್ಕು | - | ಮಿಯಾಂವ್ ಮಿಯಾಂವ್ |
| ಇಲಿ | - | ಚೀಂ ಚೀಂ |
| ಅಳಿಲು | - | ಚಿಲ್ ಚಿಲ್ |



## ಬರೆಯುವ

**ಕೊಟ್ಟಿರುವ ಪದಗಳನ್ನು ಬಳಸಿ ಉದಾಹರಣೆಯಂತೆ ವಾಕ್ಯ ಬರೆಯಿರಿ.**


| | |
|---|---|
| ಜಿಂಕೆ - ಜಿಗಿ | ಜಿಂಕೆ ಜಿಗಿಯುತ್ತದೆ |
| ಆನೆ - ನಡೆ | |
| ಗಿಳಿ - ಹಾರು | |
| ಕಪ್ಪೆ - ಕುಪ್ಪಳಿಸು | |

“ಮಿನ್ನು.... ಬಾ ಆಟ ಆಡೋಣ”. ರವಿ ಕರೆದನು. ರವಿ, ಜಿಮ್ಮಿ, ಗಂಗೆ, ಬಿಲ್ಲಿ, ಮಿನ್ನು, ಪಿಂಕು ಕಣ್ಣಾ ಮುಚ್ಚೇ ಆಟ ಆಡಿದರು. ಮಧ್ಯಾಹ್ನವಾಯಿತು. “ರವಿಯಣ್ಣಾ.... ನನಗೆ ಹಸಿವಾಗುತ್ತಿದೆ. ನಾನು ಹೋಗುತ್ತೇನೆ” ಮಿನ್ನು ಹೇಳಿತು. “ನಿಲ್ಲು ಮಿನ್ನು. ಹಾಲು ಕೊಡುತ್ತೇನೆ”.

ರವಿ ಮಿನ್ನುವಿಗೆ ಹಾಲು ಕೊಟ್ಟನು. “ಆಹಾ! ತುಂಬ ರುಚಿಯಾಗಿದೆ. ಇದು ಎಲ್ಲಿಂದ?” ಮಿನ್ನು ಕೇಳಿತು. ರವಿ ಮಿನ್ನುವಿಗೆ ತುಂಗೆ ದನವನ್ನು ತೋರಿಸಿದನು.


## ಹೇಳುವ

- ಯಾರು ಯಾರು ಆಟ ಆಡಿದರು?
- ರವಿ ಮಿನ್ನುವಿಗೆ ಏನು ಕೊಟ್ಟನು?
- ನಿಮ್ಮ ಮನೆಯಲ್ಲಿರುವ ಸಾಕು ಪ್ರಾಣಿಗಳಿಗೆ ನೀವು ಏನೇನು ಕೊಡುತ್ತೀರಿ?



## ಓದುವ

**ದನದ ಕುರಿತು ಕೊಟ್ಟಿರುವ ವಿವರಣೆಯನ್ನು ಓದಿರಿ.**



ದನಕ್ಕೆ ನಾಲ್ಕು ಕಾಲುಗಳಿವೆ.

ಎರಡು ಕೋಡುಗಳಿವೆ.

ದನ ಹಾಲು ಕೊಡುತ್ತದೆ.

ಅಂಬಾ ಎಂದು ಕೂಗುತ್ತದೆ.

## ಬರೆಯುವ

**ಬೆಕ್ಕಿನ ಕುರಿತು ಬರೆಯಿರಿ.**



## ಬರೆಯುವ

**ಒಗಟಿಗೆ ಉತ್ತರ ಬರೆಯಿರಿ.**

ಹುಲಿಯಂತೆ ಕಾಣುವೆ,

ಇಲಿಯನ್ನು ಹಿಡಿಯುವೆ,

ನಾನು ಯಾರು?



## ಬರೆಯುವ

| | | |
|---|---|---|
| ಆಡು | | |
| ಬೆಕ್ಕು | ಹಾಲು | ಕಾಯುತ್ತದೆ |
| ದನ | ಮೊಟ್ಟೆ | ಹಿಡಿಯುತ್ತದೆ |
| ಕೋಳಿ | ಇಲಿ | ಇಡುತ್ತದೆ |
| ಬಾತುಕೋಳಿ | ಮನೆ | ಕೊಡುತ್ತದೆ |
| ನಾಯಿ | | |

ನಾಯಿ ಮನೆ ಕಾಯುತ್ತದೆ.

ಬೆಳಗಾಯಿತು. ಕಾಕಾಕಾ.... ಕಾಗೆ ಕೂಗಿತು.

ಕೊಕ್ಕೊಕೋಕ್ಕೋ ಕೋಳಿ ಕೆಲೆಯಿತು.

ಮಿನ್ನು ಪೊಟರೆಯಿಂದ ಇಣುಕಿ ನೋಡಿತು.

ತಂಪಾದ ಗಾಳಿ ಬೀಸುತ್ತಿತ್ತು. ಮಿನ್ನುವಿಗೆ ಸಂತೋಷವಾಯಿತು.





## ಬರೆಯುವ

ಪದಗಳನ್ನು ಸೇರಿಸಿಕೊಂಡು ಪದ್ಯ ಮುಂದುವರಿಸಿ ಬರೆಯಿರಿ.

### ಪ್ರಾಣಿಗಳ ಕೂಗು


ಕಾಗೆಯು ಕೂಗಿತು ಕಾಕಾಕಾ

ಕೋಳಿಯು ..........................

..................................................

..................................................

..................................................



ಅಂಗಳದಲ್ಲಿ ತಾಯಿ
ಕೋಳಿ ಮತ್ತು ಮರಿಗಳು
ಕಾಳುಗಳನ್ನು
ಹೆಕ್ಕುತ್ತಿದ್ದುವು. ಅಲ್ಲಿಗೆ
ಒಂದು ಗಿಡುಗ ಹಾರಿ
ಬಂತು. ಅದನ್ನು ಕಂಡ
ಕೋಳಿಮರಿಗಳು ಕಿಯೋಂ
ಕಿಯೋಂ ಎಂದು
ಗಟ್ಟಿಯಾಗಿ ಕೂಗಿದುವು.
ಚಿಲ್ ಚಿಲ್ ಚಿಲ್
ಮಿನ್ನು ಸದ್ದು ಮಾಡಿತು.

ರವಿ ಓಡಿ ಬಂದನು. ಗಿಡುಗವನ್ನು ಓಡಿಸಿದನು.

ಕೋಳಿಮರಿಗಳಿಗೂ ಮಿನ್ನುವಿಗೂ

ತುಂಬಾ ಸಂತೋಷವಾಯಿತು.

“ರವಿಯಣ್ಣಾ..... ಬಾ ಆಟ ಆಡೋಣ”

ಎಂದು ಅವರು ಹೇಳಿದರು.

ಗೆಳೆಯರು ಆಟವಾಡತೊಡಗಿದರು.



## ಹೇಳುವ


- ಕೋಳಿಮರಿಗಳು ಯಾಕೆ ಕೂಗಿದುವು?
- ರವಿ ಗಿಡುಗವನ್ನು ಹೇಗೆ ಓಡಿಸಿರಬಹುದು?

## ಬರೆಯುವ

| ಕಾಡು ಪ್ರಾಣಿಗಳು | ಸಾಕು ಪ್ರಾಣಿಗಳು |
|---|---|
| | |

## ಆಕೃತಿ ತಯಾರಿಸುವ

ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸಿ ಪ್ರಾಣಿಗಳ ಆಕೃತಿ ತಯಾರಿಸಿರಿ.










ಹಾಡುವ

## ಗೆಳೆಯರ ಆಟ

ರವಿಯು ತನ್ನ ಗೆಳೆಯರನ್ನು
ಕೂಗಿ ಕರೆದನು।
ಮಿನ್ನು ಜಿಮ್ಮಿ ಗಂಗೆ ಬಿಲ್ಲಿ
ಬನ್ನಿರೆಂದನು॥
ರವಿಯ ಕರೆಗೆ ಗೆಳೆಯರೆಲ್ಲ
ಓಡಿ ಬಂದುವು।
ಹರುಷದಿಂದ ನಲಿದು ಕುಣಿದು
ಸುತ್ತು ನೆರೆದುವು॥
ಪಿಂಕು ತನ್ನ ಗೆಳೆಯರಿಗೆ
ಸಿಹಿಯ ಹಂಚಿತು।
ಆಟವಾಡಿ ಪದ್ಯಹಾಡಿ
ನಲಿವ ಎಂದಿತು॥
ಗೆಳೆಯರೆಲ್ಲ ಆಟವಾಡಿ
ಸಮಯ ಕಳೆದುವು।
ಪದ್ಯಹಾಡಿ ಕತೆಯ ಹೇಳಿ
ಹರುಷ ಪಡೆದುವು॥



## ಓದುವ

ಮೋಟು ನರಿಗೆ ಹಸಿವಾಗತೊಡಗಿತು. ಅದು ಕಾಡಿನಿಂದ ಊರಿನ ಕಡೆಗೆ ಹೊರಟಿತು. ಎಲ್ಲೆಲ್ಲೂ ಕತ್ತಲು. ಮೋಟು ಕಳ್ಳ ಹೆಜ್ಜೆ ಇಡುತ್ತಾ ಒಂದು ಮನೆಯ ಬಳಿಗೆ ಬಂತು. ಬೌಬೌಬೌ... ನಾಯಿಗಳು ಬೊಗಳುತ್ತಾ ನರಿಯ ಕಡೆಗೆ ಬಂದುವು. ನರಿ ಹೆದರಿ ಅಲ್ಲೇ ಇದ್ದ ಪಾತ್ರೆಯೊಳಗೆ ಹಾರಿತು. ನರಿಯನ್ನು ಕಾಣದಿದ್ದಾಗ ನಾಯಿಗಳು ಅಲ್ಲಿಂದ ಹೊರಟು ಹೋದವು.

ಆ ಪಾತ್ರೆಯಲ್ಲಿ ತುಂಬಾ ನೀಲಿ ಬಣ್ಣದ ನೀರಿತ್ತು. ನರಿ ಪಾತ್ರೆಯೊಳಗೆ ಅತ್ತಿತ್ತ ಹೊರಳಾಡಿತು. ಪಾತ್ರೆ ಮಗುಚಿ ಬಿತ್ತು. ನರಿ ಪಾತ್ರೆಯಿಂದ ಹೊರಗೆ ಹಾರಿ ಕಾಡಿನ ಕಡೆಗೆ ಓಡಿತು.



ಕತ್ತಲು ಕಳೆದು ಬೆಳಗಾಯಿತು. ಮೋಟುವಿಗೆ ತನ್ನ ಮೈಯ ಬಣ್ಣ ನೀಲಿಯಾಗಿರುವುದು ಗೊತ್ತಾಯಿತು. ಅದಕ್ಕೊಂದು ಉಪಾಯ ಹೊಳೆಯಿತು.



ಅದು ಕಾಡಿನ ಪ್ರಾಣಿಗಳನ್ನೆಲ್ಲಾ ಕರೆಯಿತು. ಹೊಸ ಪ್ರಾಣಿಯನ್ನು ಕಂಡು ಕಾಡಿನ ಪ್ರಾಣಿಗಳಿಗೆ ಆಶ್ಚರ್ಯವಾಯಿತು. "ಯಾರು ನೀನು?" ಸಿಂಹ ಕೇಳಿತು. "ನಾನು ಈ ಕಾಡಿನ ರಾಜ, ಇನ್ನು ಮುಂದೆ ನಾನು ಹೇಳಿದಂತೆ ನೀವು ಕೇಳಬೇಕು. ನನಗೆ ಬೇಕಾದ ಆಹಾರವನ್ನು ತಂದು ಕೊಡಬೇಕು" ನೀಲಿ ನರಿ ಹೇಳಿತು. ಎಲ್ಲಾ ಪ್ರಾಣಿಗಳು ಒಪ್ಪಿದವು.



ಕೆಲವು ದಿನಗಳು ಕಳೆದುವು. ಸುತ್ತಲೂ ಬೆಳದಿಂಗಳು ಹರಡಿತ್ತು. ಕಾಡಿನಲ್ಲಿರುವ ನರಿಗಳು ಒಟ್ಟು ಸೇರಿದುವು. ಎತ್ತರವಾದ ಬಂಡೆಯ ಮೇಲೆ ಕುಳಿತು ಉಕ್ಯೋಓ..... ಉಕ್ಯೋಓ..... ಎಂದು ಊಳಿಟ್ಟವು. ಇದನ್ನು ಕೇಳಿದ ನೀಲಿನರಿಯೂ ಊಳಿಟ್ಟಿತು.



"ಗೆಳೆಯರೇ, ಇದು ನರಿ. ಕಾಡಿನ ರಾಜನಲ್ಲ" ಸಿಂಹ ಹೇಳಿತು. ಮೋಸಗಾರ ಮೋಟು ನರಿಯನ್ನು ಅವುಗಳೆಲ್ಲಾ ಸೇರಿ ಕಾಡಿನಿಂದ ಓಡಿಸಿದುವು.

## ಪಾಠ – 7

# ಮಣ್ಣು – ಹೊನ್ನು



ಕಥಕ್.... ಕಥಕ್.... ಕಥಕ್.... ಛೇ.... ಏನಿದು ಸದ್ದು?

ಪಾಚು ಇಲಿಗೆ ಎಚ್ಚರವಾಯಿತು. ಬಿಲದಿಂದ ಇಣುಕಿ ನೋಡಿತು.

ಕಾಕು ಕೋಳಿಯು ಗದ್ದೆ ಅಗೆಯುತ್ತಿತ್ತು. ಈ ಕಾಕು ನಿದ್ದೆ ಮಾಡಲೂ ಬಿಡುವುದಿಲ್ಲ.

ಕಾಕೂ.... ಕಾಕೂ.... ಪಾಚು ಕೂಗಿ ಕರೆಯಿತು.

ಕಾಕು ಅಗೆಯುತ್ತಲೇ ಇತ್ತು.



## ಓದುವ

ಮಂಗ ಟಿಲ್ಲರಿನಿಂದ ಗದ್ದೆ ಉಳುತ್ತಿದೆ.
ಆನೆ ಪಿಕ್ಕಾಸಿನಿಂದ ನೆಲ ಅಗೆಯುತ್ತಿದೆ.
ಆಡು ಬುಟ್ಟಿಯಲ್ಲಿ ಗೊಬ್ಬರ ತರುತ್ತಿದೆ.
ಕರಡಿ ಪಂಪಿನಿಂದ ನೀರು ಹಾಕುತ್ತಿದೆ.



ಪಾಚು ಕಾಕುವಿನ ಬಳಿಗೆ ಹೋಯಿತು.
ಕಾಕೂ.... ಕಾಕೂ.... ಪುನಃ ಪಾಚು ಕರೆಯಿತು.
ಕಾಕು ತಲೆ ಎತ್ತಿ ನೋಡಿತು.

ಪಾಚು : ನೀನು ಯಾಕೆ ಅಗೆಯುತ್ತಿರುವೆ?
ಕಾಕು : ಭತ್ತದ ಕೃಷಿ ಮಾಡಲು.
ಪಾಚು : ಹ್ಹ.. ಹ್ಹ.. ಹ್ಹ.. ನೀನೂ ಭತ್ತ ಬೆಳೆಸುವುದೇ?
ಕಾಕು : ಯಾಕೆ ಆಗದು? ನೀನೂ ಬರುವೆಯಾ? ತುಂಬ ಭತ್ತ ಬೆಳೆಸೋಣ.
ಪಾಚು : ನಾನು ಬರುವುದಿಲ್ಲ. ನೀನು ಭತ್ತ ಬೆಳೆಸುವುದು ಯಾಕೆ?
ಕಾಕು : ತಿನ್ನಲು. ತುಂಬ ಬೆಳೆದರೆ ಆಹಾರ ಸಿಗದೇ ಇದ್ದಾಗ ತಿನ್ನಬಹುದು.

ಪಾಚು ಸುತ್ತಲೂ ನೋಡಿತು. ಎಲ್ಲರೂ ಬಗೆ ಬಗೆಯ ಕೃಷಿ ಕೆಲಸ ಮಾಡುತ್ತಿದ್ದರು. "ಇವರಿಗೆ ಹುಚ್ಚು. ನಾನು ನಿದ್ದೆ ಮಾಡುತ್ತೇನೆ" ಎಂದು ಹೇಳಿ ಪಾಚು ತನ್ನ ಬಿಲಕ್ಕೆ ಹೋಯಿತು.




## ಹೇಳುವ

- ನೀವು ಯಾವ ಯಾವ ಕೃಷಿ ಮಾಡುತ್ತೀರಿ?
- ಗದ್ದೆ ಉಳುವುದಕ್ಕೆ ಯಾವ ಉಪಕರಣವನ್ನು ಉಪಯೋಗಿಸುತ್ತಾರೆ?
- ಕೃಷಿ ಮಾಡಲು ಯಾವ ಯಾವ ಉಪಕರಣಗಳನ್ನು ಬಳಸುತ್ತಾರೆ?

## ಬರೆಯುವ

**ಇಲ್ಲಿ ಕೆಲವು ಉಪಕರಣಗಳ ಚಿತ್ರಗಳಿವೆ. ಅವುಗಳ ಹೆಸರುಗಳನ್ನು ಸೂಕ್ತವಾದ ಕೋಣೆಯಲ್ಲಿ ಬರೆಯಿರಿ.**



| ಕೃಷಿ ಕೆಲಸಕ್ಕೆ ಬೇಕಾದ ಉಪಕರಣಗಳು | ಇತರ ಕೆಲಸಗಳಿಗೆ ಬೇಕಾದ ಉಪಕರಣಗಳು |
| --- | --- |
| | |

ಕಾಕು ಹೊಲಕ್ಕೆ ಗೊಬ್ಬರ ಹಾಕಿತು.

ಬುಟ್ಟಿಯಲ್ಲಿ ಭತ್ತ ತಂದು ಬಿತ್ತಿತು. ಮಳೆ ಬಂತು.

ಭತ್ತ ಮೊಳಕೆ ಒಡೆಯಿತು.

ಹೊಲವೆಲ್ಲ ಹಚ್ಚ ಹಸುರಾಯಿತು.

ಕಾಕು ಕಳೆಗಳನ್ನು ಕಿತ್ತಿತು. ದಿನಗಳು ಕಳೆದುವು.


ಭತ್ತದ ಗಿಡಗಳಲ್ಲಿ ತೆನೆಗಳು ಬಂದುವು.

ಮಳೆ ಕಡಿಮೆ ಆಯಿತು. ತೆನೆಗಳು ಬಲಿತುವು.

ಹೊಲವೆಲ್ಲ ಬಂಗಾರ ಆಯಿತು.

ಕಾಕು ಹಿರಿ ಹಿರಿ ಹಿಗ್ಗಿತು.





## ಹಾಡುವ

ಲಲ್ಲ ಲಲ್ಲ ಲಾಲಲ
ಲಲ್ಲ ಲಲ್ಲ ಲಾಲಲ
ಸುಗ್ಗಿ ಹಿಗ್ಗಿ ಬಂದಿದೆ
ಸುತ್ತ ಚೆಲುವು ಚೆಲ್ಲಿದೆ
ಬೆಳೆಯು ಮನೆಯ ತುಂಬಿದೆ
ಹಕ್ಕಿ ಮಿಗವು ನಲಿದಿದೆ
ಲಲ್ಲ ಲಲ್ಲ ಲಾಲಲ
ಲಲ್ಲ ಲಲ್ಲ ಲಾಲಲ
ಗೆಳೆಯರನ್ನು ಕರೆಯುವ
ಹಬ್ಬದಡುಗೆ ಮಾಡುವ
ಪಾಯಸವನು ಸವಿಯುವ
ಆಡಿ ಹಾಡಿ ಕುಣಿಯುವ
ಲಲ್ಲ ಲಲ್ಲ ಲಾಲಲ
ಲಲ್ಲ ಲಲ್ಲ ಲಾಲಲ





## ಹೇಳುವ

- ಮನೆಯನ್ನು ತುಂಬಿದುದು ಯಾವುದು?
- ಸುಗ್ಗಿ ಹಬ್ಬವನ್ನು ಹೇಗೆ ಆಚರಿಸುತ್ತಾರೆ?



## ಬರೆಯುವ

ಗದ್ದೆಯನ್ನು ಉತ್ತು ಬಿತ್ತಿ
ಭತ್ತ ಗೋಧಿ ಬೆಳೆಸಿಕೊಡುವೆ
ನಾನು ಯಾರು?





ಡುರು ಡುರು ಸದ್ದು ಮಾಡಿ
ಚಕ್ರದಿಂದ ಮುಂದೆ ಸಾಗಿ
ನೆಲವನೆಲ್ಲ ಅಗೆದುಕೊಡುವೆ
ನಾನು ಯಾರು?

**ಚಿತ್ರಕ್ಕೆ ಸೂಕ್ತವಾದ ಒಗಟು ಬರೆಯಿರಿ.**



..........................................................

..........................................................

..........................................................

## ಬರೆಯುವ

**ಕೆಳಗಿನ ಪದಗಳನ್ನು ಜೋಡಿಸಿ ವಾಕ್ಯ ರಚಿಸಿರಿ.**

ಬಿತ್ತಿತು ಮಾಡಿತು ಭತ್ತ ಅಗೆಯಿತು


ನೋಡಿತು ನಿದ್ದೆ ಪಾಚು ಕಾಕು

ಸುತ್ತಲೂ ಹೊಲವನ್ನು

- ಪಾಚು ಸುತ್ತಲೂ ನೋಡಿತು.
- ......................................................................................
- ......................................................................................
- ......................................................................................
- ......................................................................................
- ......................................................................................
- ......................................................................................

ಸುಗ್ಗಿಯ ಕಾಲ ಮುಗಿಯುತ್ತಾ ಬಂತು. ಪಾಚು ಇಲಿಗೆ ತಿನ್ನಲು ಆಹಾರ ಇಲ್ಲದಾಯಿತು. ಎಲ್ಲಾ ಕಡೆ ಹುಡುಕಿತು. ತಿನ್ನಲು ಏನೂ ಸಿಗಲಿಲ್ಲ. ಆಗ ಅದಕ್ಕೆ ಕಾಕುವಿನ ನೆನಪು ಆಯಿತು. ಅದು ಕಾಕುವಿನ ಬಳಿಗೆ ಬಂತು.





## ಬರೆಯುವ

ಪಾಚು : ಕಾಕೂ.... ಕಾಕೂ....

ಕಾಕು : ಯಾರದು?

ಪಾಚು : ........................................................................................

ಕಾಕು : ........................................................................................

ಪಾಚು : ........................................................................................

ಕಾಕು : ........................................................................................

ಕಾಕುವಿಗೆ ಕರುಣೆ ಉಕ್ಕಿತು. ಪಾಚುವಿಗೆ ತಿನ್ನಲು ಭತ್ತ ಕೊಟ್ಟಿತು. ಆಗ ಪಾಚು "ಮುಂದಿನ ಸಲ ಒಟ್ಟಿಗೆ ಕೃಷಿ ಮಾಡುವ" ಎಂದು ಹೇಳಿತು.



## ಹೇಳುವ

- ಕಾಕು ಮತ್ತು ಪಾಚು ಯಾವ ಯಾವ ಕೃಷಿ ಮಾಡಲು ಯೋಚಿಸಿರಬಹುದು?



## ಓದುವ

### ಕೂಟ ಬೇಸಾಯ

ಗೆಳೆಯರೆಲ್ಲ ಸೇರಿ ಕೃಷಿ ಮಾಡಲು ತೊಡಗಿದರು. ಆನೆ ಪೊದರು ಕಡಿಯಿತು. ಹಂದಿ ನೆಲವನ್ನು ಅಗೆಯಿತು. ಕಾಕು ಮತ್ತು ಪಾಚು ತರಕಾರಿ ಬೀಜ ಬಿತ್ತಿದವು. ಎತ್ತು ಬಾಳೆ ನೆಟ್ಟಿತು. ಮಂಗ ತೆಂಗಿನ ಗಿಡ ನೆಟ್ಟಿತು. ಮೊಲ ಮತ್ತು ಹೆಗ್ಗಣ ಗೆಣಸು ನೆಟ್ಟವು. ಆಡು ಬಸಳೆ ಮತ್ತು ತೊಂಡೆ ನೆಟ್ಟಿತು. ಜಿಂಕೆ ಚಪ್ಪರ ಹಾಕಿತು. ಆನೆ ಸೊಪ್ಪು ತಂದಿತು. ದನ ಗೊಬ್ಬರ ಹಾಕಿತು. ಕರಡಿ ನೀರು ಎರೆಯಿತು. ಗಿಡಗಳು ಹುಲುಸಾಗಿ ಬೆಳೆದವು. ಊರು ತುಂಬ ಹಸಿರಾಯಿತು. ಗೆಳೆಯರೆಲ್ಲ ಸಂತಸ ಪಟ್ಟರು.



## ಬರೆಯುವ

- ಗೆಳೆಯರು ಯಾವ ಯಾವ ಬೆಳೆಗಳನ್ನು ಬೆಳೆಸಿದರು?

## ಹಾಡುವ, ಅಭಿನಯಿಸುವ

### ದುಡಿಮೆ

ನೆಲವ ನಾವು ಅಗೆಯುವ
ಬೀಜವನ್ನು ಬಿತ್ತುವ
ನೀರು ಹೊತ್ತು ಹೊಯ್ಯುವ
ಗೊಬ್ಬರವನ್ನು ಹಾಕುವ
ಕಳೆಯನೆಲ್ಲ ಕೀಳುವ
ಬೆಳೆಗಳನ್ನು ಕೊಯ್ಯುವ
ಬುಟ್ಟಿಗಳನು ತುಂಬುವ
ಮನೆಗೆ ಹೊತ್ತು ನಡೆಯುವ

## ಬರೆಯುವ

**ಇಲ್ಲಿ ಕೃಷಿಗೆ ಸಂಬಂಧಿಸಿದ ಕೆಲವು ಕೆಲಸಗಳಿವೆ. ಅವುಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**



ಸಸಿ ನೆಡುವುದು.



ನೆಲ ಅಗೆಯುವುದು.





ಬೀಜ ಬಿತ್ತುವುದು.



ಬೆಳೆಕೊಯ್ಯುವುದು.

## ಬಣ್ಣ ಹಚ್ಚುವ





## ಬರೆಯುವ

**ಕೋಣೆಗಳಲ್ಲಿರುವ ಅಕ್ಷರಗಳನ್ನು ಉಪಯೋಗಿಸಿ ತರಕಾರಿಗಳ ಹೆಸರು ಬರೆಯಿರಿ.**

| | | | | |
|---|---|---|---|---|
| ಬೆಂ | ಪ | ನು | ಅ | ಗ |
| ಬ | ಗ್ಗೆ | ಹಾ | ಕಿ | ವ |
| ಸಂ | ವೆ | ರಿ | ಲ | ಡು |
| ಸ | ನೆ | ದ | ಹ | ಡೆ |



## ಬರೆಯುವ

**ಕೋಣೆಯಲ್ಲಿರುವ ಪದಗಳನ್ನು ಬಿಟ್ಟ ಸ್ಥಳದಲ್ಲಿ ತುಂಬಿಸಿ ವಾಕ್ಯ ಪೂರ್ತಿಗೊಳಿಸಿರಿ.**

| ಕೃಷಿ | ತರಕಾರಿ | ಹೊಲದಲ್ಲಿ | ಸಂತೆಯಲ್ಲಿ | ಭತ್ತದ |
|---|---|---|---|---|

ಆಹಾರಕ್ಕಾಗಿ ನಾವು ____________ ಮಾಡಬೇಕು.

ರೈತನು ____________ ದುಡಿಯುತ್ತಾನೆ.

ರುಚಿ ರುಚಿ ಊಟಕ್ಕೆ ____________ ಬೇಕು.

ಅಂಗಳದಲ್ಲಿ ____________ ರಾಶಿ ಇದೆ.

ತರಕಾರಿಗಳನ್ನು ____________ ಮಾರುತ್ತಾರೆ.




## ಓದುವ

- ಕೈಕೆಸರಾದರೆ ಬಾಯಿ ಮೊಸರು
- ಕಾಯಕವೆ ಕೈಲಾಸ

ಹೊಲದಲ್ಲಿ ರಾಶಿ ರಾಶಿ ತರಕಾರಿಗಳು ಬೆಳೆದವು.
ಗೆಳೆಯರೆಲ್ಲ ಸೇರಿ ಹಂಚಿ ತಿಂದರು.
ತರಕಾರಿ ಇನ್ನೂ ಬಾಕಿ ಉಳಿಯಿತು. ಕಾಕು ಮತ್ತು
ಪಾಚುವಿಗೆ ಬಹಳ ಖುಷಿ ಆಯಿತು.

"ಈ ತರಕಾರಿಗಳನ್ನು ಏನು ಮಾಡುವ?"
ಕಾಕು ಕೇಳಿತು.
"ಇವುಗಳನ್ನು ಸಂತೆಯಲ್ಲಿ ಮಾರೋಣ"
ಎಂದಿತು ಪಾಚು.



ಎಲ್ಲರೂ ಸೇರಿ ತರಕಾರಿಗಳನ್ನು ಗಾಡಿಗೆ ತುಂಬಿಸಿದರು. ಗಾಡಿಯನ್ನು ಸಂತೆಗೆ ಸಾಗಿಸಿದರು. ಸಂತೆಯಲ್ಲಿ ತರಕಾರಿಗಳನ್ನು ಮಾರಾಟ ಮಾಡಿದರು. ಕೈ ತುಂಬಾ ಹಣ ಪಡೆದರು. ಎಲ್ಲರೂ ಸಂತಸ ಪಟ್ಟರು. "ಮುಂದಿನ ಸಲ ಇನ್ನೂ ಹೆಚ್ಚು ಕೃಷಿ ಮಾಡಬಹುದು" ಮಂಗಣ್ಣ ಹೇಳಿತು. "ಹೌದು ಹೌದು ಹೆಚ್ಚು ಕೃಷಿ ಮಾಡಿದರೆ ತುಂಬಾ ಹಣ ಸಂಪಾದಿಸಬಹುದು." ಕಾಕು ಹೇಳಿತು.



## ಹಾಡುವ

### ಕೃಷಿಕ

ಬೆಳಗಿನ ಹೊತ್ತು ಬೇಗನೆ ಎದ್ದು
ಸರ ಸರ ನಡೆವನು ಹೊಲದ ಕಡೆ
ಹೊಲವನು ಉತ್ತು ಬೀಜವ ಬಿತ್ತಿ
ಹಸುರಿನ ಪೈರನು ಬೆಳೆಯುವನು
ಹೊಲದಲಿ ಕೊಯ್ಲು ಬೇಗನೆ ಮುಗಿಸಿ
ತರತರ ಬೆಳೆಗಳ ಬೆಳೆಸುವನು
ಹಸುರಿನ ಹರಿವೆ ಉರುಟಿನ ಬದನೆ
ಏನಿದು ಬಗೆ ಬಗೆ ತರಕಾರಿ
ಮೈಯನು ದುಡಿಸಿ ಬೆವರನು ಸುರಿಸಿ
ದುಡಿಮೆಯ ಹಿರಿಮೆಯ ಸಾರುವನು.



## ಹೇಳುವ


**ಚಿತ್ರನೋಡಿ ಕಥೆ ಹೇಳಿರಿ**












# ಪಾಠ - 8

# ಪೋಂ... ಪೋಂ...

ಪೋಂ.... ಪೋಂ....

“ಅಪ್ಪಾ ರಿಕ್ಷಾ ಬಂತು” ಐನಾ ಹೇಳಿದಳು. ತಂದೆ ಹೊರಗೆ ಬಂದರು. ಇಬ್ಬರೂ ರಿಕ್ಷಾ ಏರಿದರು.



"ಟಾ.... ಟಾ...." ಎಂದಳು ಅಮ್ಮ. ಐನಾಳಿಗೆ ಖುಷಿಯೋ ಖುಷಿ.

ಅವಳು ತಂದೆಯೊಂದಿಗೆ ಕಡಲು ನೋಡಲು ಹೊರಟಿದ್ದಳು.

ಅವರು ಕನಕಪುರ ರೈಲು ನಿಲ್ದಾಣ ತಲುಪಿದರು.

ಐನಾಳಿಗೆ ರೈಲಿನಲ್ಲಿ ಹೋಗುವ ತವಕ.

ಆಶ್ಚರ್ಯದಿಂದ ಎಲ್ಲವನ್ನೂ ನೋಡಿದಳು.

## ಹೇಳುವ

- ಚಿತ್ರ ನೋಡಿ ವಾಹನಗಳನ್ನು ಗುರುತಿಸಿ ಹೇಳಿರಿ.



ಠಣ್... ಠಣ್... ಠಣ್... ಠಣ್... ಘಂಟೆ ಬಾರಿಸಿತು.

ಕುಳಿತವರೆಲ್ಲರು ಎದ್ದರು.

"ರೈಲು ಗಾಡಿ ಬರುವ ಸಮಯ ಆಯಿತು" ತಂದೆ

ಹೇಳಿದರು.  ರೈಲುಗಾಡಿ ಬಂದಿತು. ಐನಾಳಿಗೆ ಎಲ್ಲಿಲ್ಲದ ಸಂತಸ.

ಅವಳು ತಂದೆಯ ಕೈಹಿಡಿದು ರೈಲು ಗಾಡಿಯನ್ನು ಏರಿದಳು.

ಕಿಟಕಿಯ ಬದಿಯ ಸೀಟಿನಲ್ಲಿ ಕುಳಿತಳು.

ಕೂ ಕೂ ಕೂಗುತ್ತಾ ರೈಲು ಗಾಡಿ ಹೊರಟಿತು.



## ಹಾಡುವ ಅಭಿನಯಿಸುವ

### ರೈಲುಗಾಡಿ

ಕೂ ಕೂ ಕೂ ಕೂ ಕೂಗುವ ಗಾಡಿ
ಹೊಗೆಯನು ಉಗುಳುತ ಹೊರಟಿತು ನೋಡಿ
ಚುಕು ಬುಕು ಚುಕು ಬುಕು ಸದ್ದನು ಮಾಡಿ
ಹಳಿಗಳ ಮೇಲೆ ಸಾಗುವ ಮೋಡಿ
ಜನಗಳು ತುಂಬಿದ ಅಂದದ ಗಾಡಿ
ವೇಗದಿ ಓಡುವ ಸುಂದರ ಗಾಡಿ
ಮಕ್ಕಳ ಮೆಚ್ಚಿನ ಚಂದದ ಗಾಡಿ
ಎಲ್ಲರ ಪ್ರೀತಿಯ ಚುಕು ಬುಕು ಗಾಡಿ

## ಬರೆಯುವ

ಐನಾ ರೈಲುಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ ಏನೇನು ಕಂಡಿರಬಹುದು?

__________ __________ __________ __________ __________

__________ __________ __________ __________ __________

ಗಿರಿನಗರ ಬಂದೇ ಬಿಟ್ಟಿತು. ಅಲ್ಲಿ ಹಲವು ರೈಲುಗಾಡಿಗಳು ನಿಂತಿದ್ದುವು. ಐನಾ ಅಪ್ಪನೊಡನೆ ರೈಲುಗಾಡಿಯಿಂದ ಇಳಿದಳು. ನಿಲ್ದಾಣವು ಜನರಿಂದ ತುಂಬಿ ತುಳುಕುತ್ತಿತ್ತು. ಅವರು ಅಲ್ಲಿಂದ ಹೊರಗೆ ಬಂದರು. ರಸ್ತೆಯಲ್ಲಿ ವಿವಿಧ ವಾಹನಗಳು ಸಂಚರಿಸುತ್ತಿದ್ದುವು. ಕೆಲವು ವಾಹನಗಳು ರಸ್ತೆ ಬದಿಯಲ್ಲಿ ನಿಂತಿದ್ದುವು. ಅಲ್ಲಿ ನಿಂತಿದ್ದ ಬಿಳಿ ಬಣ್ಣದ ಬಸ್ಸು ಐನಾಳನ್ನು ಕರೆಯಿತು. "ಮಗೂ ಇಲ್ಲಿ ಬಾ. ನಿನಗೆ ಈ ನಗರವನ್ನು ತೋರಿಸುತ್ತೇನೆ."

## ಓದುವ

ನಾನು ಬಸ್ಸು. ನನ್ನ ಹೆಸರು ಐರಾವತ. ನನ್ನ ಬಣ್ಣ ಬಿಳಿ. ಜನರನ್ನು ಹೊತ್ತು ನಗರ ಸುತ್ತುತ್ತೇನೆ. ನನ್ನೊಳಗೆ ಐವತ್ತು ಜನರಿಗೆ ಕುಳಿತು ಕೊಳ್ಳಬಹುದು. ನನಗೆ ಆರು ಚಕ್ರಗಳಿವೆ. ನನ್ನಲ್ಲಿ ಯಂತ್ರವಿದೆ. ನನಗೆ ಚಲಿಸಲು ಇಂಧನ ಬೇಕು. ಚಾಲಕನು ನನ್ನನ್ನು ಓಡಿಸುತ್ತಾನೆ.



## ಹೇಳುವ

- ನೀವು ಇಷ್ಟಪಡುವ ವಾಹನ ಯಾವುದು? ಯಾಕೆ?

## ಬರೆಯುವ

**ಕೆಳಗಿನ ವಾಕ್ಯಗಳಲ್ಲಿ ಬಿಟ್ಟು ಹೋದ ಪದಗಳನ್ನು ತುಂಬಿಸಿರಿ.**

| | | | |
|---|---|---|---|
| ಆಸನ | ಚಕ್ರಗಳು | ಚಲಿಸುತ್ತದೆ | ಸದ್ದು |

ಸೈಕಲಿಗೆ ಎರಡು ________________ ಇವೆ.


ಇದು ಕಿಣಿ ಕಿಣಿ ________________ ಮಾಡುತ್ತದೆ.

ಇದರಲ್ಲಿ ಒಂದೇ ________________ ಇದೆ.

ಇದು ಪೆಡಲನ್ನು ತುಳಿದಾಗ ________________.

ಐನಾ ಅಪ್ಪನ ಕೈ ಹಿಡಿದು ಬಸ್ಸು ಹತ್ತಿದಳು. ಬಸ್ಸು ಮೆಲ್ಲನೆ ಚಲಿಸಿತು. ಗಿರಿನಗರದ ರಸ್ತೆಗಳಲ್ಲಿ ಸಂಚರಿಸಿತು. ಕೆಲವು ಕಡೆ ಕಂಬಗಳಲ್ಲಿ ಕೆಂಪು ಬಣ್ಣದ ದೀಪ ಉರಿದಾಗ ವಾಹನಗಳು ನಿಲ್ಲುತ್ತಿದ್ದುವು. ಹಸಿರು ದೀಪ ಉರಿದಾಗ ಮುಂದೆ ಚಲಿಸುತ್ತಿದ್ದುವು. ಅಲ್ಲಿ ರಸ್ತೆಗಳ ಮೇಲೆ ಅಡ್ಡಕ್ಕೆ ಬಿಳಿ ಗೆರೆಗಳನ್ನು ಎಳೆದಿದ್ದರು. ಅಲ್ಲಿಯೇ ಜನರು ರಸ್ತೆಯನ್ನು ದಾಟುತ್ತಿದ್ದರು.

ಐನಾ ತರ ತರದ ವಾಹನಗಳನ್ನು ಕಂಡಳು.




## ಹಾಡುವ

# ವಾಹನಗಳು

ಬಸ್ಸು ಬಂತು ಬಸ್ಸು
ಬಣ್ಣ ಬಣ್ಣದ ಬಸ್ಸು
ಜನರನ್ನು ಹೊತ್ತು
ಮುಂದಕೆ ಹೋಯ್ತು.

ಲಾರಿ ಬಂತು ಲಾರಿ
ಬಣ್ಣ ಬಣ್ಣದ ಲಾರಿ
ಸರಕನು ಹೊತ್ತು
ಮೆಲ್ಲಗೆ ಹೋಯ್ತು.

ದೋಣಿ ಬಂತು ದೋಣಿ
ಯಂತ್ರ ಇಲ್ಲದ ದೋಣಿ
ಜನರನ್ನು ಹೊತ್ತು
ತೇಲುತ ಹೋಯ್ತು.



## ಓದುವ



ರಿಕ್ಷಾ ಬಂತು.

ಹಳದಿ ರಿಕ್ಷಾ ಬಂತು.

ಶಾಲೆಗೆ ಹಳದಿ ರಿಕ್ಷಾ ಬಂತು.

## ಬರೆಯುವ

ಬಸ್ಸು ಬಂತು.



## ಬಣ್ಣ ಹಚ್ಚುವ

ನಿಮಗೆ ಇಷ್ಟವಾದ ಒಂದು ವಾಹನದ ಚಿತ್ರ ಬಿಡಿಸಿ ಬಣ್ಣ ಹಚ್ಚಿರಿ.


## ಬರೆಯುವ

ಕೆಳಗಿನ ಸೂಚನಾ ದೀಪಗಳ ಬಣ್ಣಕ್ಕೆ ಹೊಂದಿಕೆಯಾಗುವ ಸೂಚನೆಗಳಿಗೆ ಗೆರೆ ಎಳೆಯಿರಿ.

ಸಿದ್ಧರಾಗಿ

ಚಲಿಸಿ

ನಿಲ್ಲಿಸಿ



## ಬರೆಯುವ

ಕೆಳಗೆ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳನ್ನು ಓದಿರಿ. ಸರಿಯಾದವುಗಳನ್ನು ಆಯ್ಕೆ ಮಾಡಿ ಸೂಚನಾ ಫಲಕ ರಚಿಸಿರಿ.

- ರಸ್ತೆಯ ಬಲಬದಿಯಲ್ಲಿ ನಡೆಯುವುದು.
- ವಾಹನ ಬರುವಾಗ ರಸ್ತೆ ಅಡ್ಡ ದಾಟುವುದು.
- ಬಸ್ಸು ನಿಂತ ಮೇಲೆ ಸಾಲಾಗಿ ಇಳಿಯುವುದು.
- ಬಸ್ಸಿನಲ್ಲಿ ಸಂಚರಿಸುವಾಗ ತಲೆ ಮತ್ತು ಕೈ ಹೊರಗೆ ಹಾಕುವುದು.
- ಬಸ್ಸು ಚಲಿಸುತ್ತಿರುವಾಗ ಹತ್ತುವುದು.
- ಕೆಂಪು ಬಣ್ಣದ ದೀಪ ಉರಿದಾಗ ವಾಹನಗಳನ್ನು ನಿಲ್ಲಿಸುವುದು.
- ಬಸ್ಸಿನಲ್ಲಿ ನೇತಾಡಿಕೊಂಡು ಸಂಚರಿಸುವುದು.

ಐರಾವತ ಸಾಗುತ್ತಾ ಕಡಲ ತೀರಕ್ಕೆ ಬಂದಿತು. ಐನಾ ಮತ್ತು ಅಪ್ಪ ಬಸ್ಸಿನಿಂದ ಇಳಿದರು. ಪುಟ್ಟ ಮಕ್ಕಳು ಹೊಯಿಗೆಯಲ್ಲಿ ಆಟ ಆಡುತ್ತಿದ್ದರು. ದೊಡ್ಡವರು ಕಡಲಿನ ತೆರೆಗಳೊಂದಿಗೆ ಆಡುತ್ತಿದ್ದರು. ಯುವಕನೊಬ್ಬ ಐಸ್‌ಕೇಂಡಿ ಮಾರುತ್ತಿದ್ದನು. ಅಪ್ಪ ಐಸ್‌ಕೇಂಡಿ ತೆಗೆದುಕೊಟ್ಟರು. ಐನಾ ಐಸ್‌ಕ್ಯಾಂಡಿ ತಿಂದಳು. ಅವಳು ಕಡಲಿನತ್ತ ನೋಡಿದಳು. ಅವಳಿಗೆ ದೂರದಲ್ಲಿ ಒಂದು ಕಟ್ಟಡ ತೇಲುತ್ತಿರುವಂತೆ ಕಾಣಿಸಿತು. "ಅಪ್ಪಾ ಅದೇನು?" ಐನಾ ಕೇಳಿದಳು.



## ಬರೆಯುವ

- 'ಐ' ಅಕ್ಷರವಿರುವ ಪದಗಳನ್ನು ಹುಡುಕಿ ಬರೆಯಿರಿ.



## ಓದುವ



ಹಡಗು ಕಡಲಿನಲ್ಲಿ ಸಂಚರಿಸುವ ವಾಹನ. ಅದು ಅತಿ ದೊಡ್ಡ ವಾಹನ. ಅದಕ್ಕೆ ಚಲಿಸಲು ಇಂಧನ ಬೇಕು. ಅದು ಸರಕನ್ನೂ ಜನರನ್ನೂ ಹೊತ್ತು ಸಾಗುತ್ತದೆ. ಅದರಲ್ಲಿ ಆಟದ ಮೈದಾನ, ಹೋಟೆಲು, ಸಿನೆಮಾ ಮಂದಿರ, ಅಂಗಡಿಗಳು ಇವೆ. ಓದಲು ಧಾರಾಳ ಪುಸ್ತಕಗಳು ಇವೆ. ಮಲಗಲು ಕೋಣೆಗಳು ಇವೆ.

## ಹೇಳುವ

- ಹಡಗಿನಲ್ಲಿ ಏನೇನು ಇವೆ?

## ಬರೆಯುವ

- ನೀರಿನಲ್ಲಿ ಸಂಚರಿಸುವ ವಾಹನಗಳು ಯಾವುವು?

..............................................................................................

..............................................................................................

..............................................................................................

## ಬರೆಯುವ

**ಒಗಟಿಗೆ ಉತ್ತರ ಬರೆಯಿರಿ.**



ನೀರಿನ ಮೇಲೆ ತೇಲುವೆನು.

ಚಕ್ರವು ಇಲ್ಲದೆ ಚಲಿಸುವೆನು.

ನಾನು ಯಾರು?



ಆರು ಚಕ್ರಗಳು ಇವೆ.

ಸರಕನು ಹೊತ್ತು ಸಾಗುವೆ.

ನಾನು ಯಾರು?

**ಚಿತ್ರಕ್ಕೆ ಸೂಕ್ತವಾದ ಒಗಟು ಬರೆಯಿರಿ.**



**ಚಿತ್ರದಲ್ಲಿರುವ ವಾಹನದ ಕುರಿತು ಬರೆಯಿರಿ.**



ಐನಾಳಿಗೆ ಹಡಗಿನ ಬಗ್ಗೆ ತಿಳಿದಾಗ ಅಬ್ಬಾ! ಅನಿಸಿತು. ಅದೇ ಹೊತ್ತಿಗೆ ಆಗಸದಿಂದ ಏನೋ ಸದ್ದು ಕೇಳತೊಡಗಿತು. ಅವಳು ಆಕಾಶದ ಕಡೆಗೆ



ನೋಡಿದಳು. ಒಂದು ವಿಮಾನವು ತಗ್ಗಿನಲ್ಲಿ ಹಾರುತ್ತಿತ್ತು. ವಿಮಾನಕ್ಕೆ ಎರಡು ದೊಡ್ಡ ರೆಕ್ಕೆಗಳಿದ್ದುವು. ಹಸುರು ಕೆಂಪು ಬಣ್ಣದ ದೀಪಗಳು ಮಿನುಗುತ್ತಿದ್ದುವು. ಐನಾ ಖುಷಿಯಿಂದ "ವಿಮಾನ! ವಿಮಾನ!" ಎಂದು ಕುಣಿದಳು. ನೋಡುತ್ತಿದ್ದಂತೆ ವಿಮಾನವು ಆಗಸದಲ್ಲಿ ಮರೆಯಾಯಿತು.

## ಹೇಳುವ

- ಆಕಾಶದಲ್ಲಿ ಹಾರುವ ವಾಹನಗಳು ಯಾವುವು?

..................................................................

..................................................................



ಐನಾ ತಂದೆಯೊಡನೆ ಕಡಲ ತೆರೆಯಲ್ಲಿ ಆಟ ಆಡಿದಳು. ಸಂಜೆಯಾಗುತ್ತಾ ಬಂತು. ಸಮೀಪದಲ್ಲೇ ಅಂಗಡಿಗಳು ಇದ್ದುವು. ಅವರು ಅಲ್ಲಿಗೆ ಹೋದರು.



## ಓದುವ

ಅಂಗಡಿಯವನು : ಬನ್ನಿ ಬನ್ನಿ ಏನು ಬೇಕು?

ಐನಾ : ಕಥೆ ಪುಸ್ತಕಗಳು ಇವೆಯೇ?

ಅಂಗಡಿಯವನು : ಇವೆ. ಯಾವ ಕಥೆ ಪುಸ್ತಕ ಬೇಕು?


ಐನಾ : ಪ್ರಾಣಿಗಳ ಕಥೆ ಪುಸ್ತಕಗಳು ಬೇಕು.

ಅಂಗಡಿಯವನು : ಇದೋ ಇಲ್ಲಿವೆ. ಬೇಕಾದುದನ್ನು ತೆಗೆದುಕೋ. ಬೇರೆ ಏನಾದರು ಬೇಕೇ?

ಐನಾ : ಆಟದ ಹಡಗು ಇದೆಯಾ?

ಅಂಗಡಿಯವನು : ಇದೆಯಲ್ಲಾ. ಇದು ಆಗಬಹುದೇ?

ಐನಾ : ಈ ಹಡಗು ಮತ್ತು ಪುಸ್ತಕವನ್ನು ಕಟ್ಟಿ ಕೊಡಿರಿ.




ಐನಾ ಆಟಿಕೆಯ ಹಡಗನ್ನೂ ಕಥೆ ಪುಸ್ತಕವನ್ನೂ ಕೊಂಡುಕೊಂಡಳು. ಅಪ್ಪ ಅಮ್ಮನಿಗೆ ಸೀರೆ ಕೊಂಡುಕೊಂಡರು. ಬಳಿಕ ಉಪಾಹಾರ ಮುಗಿಸಿ ಮನೆಗೆ ಮರಳಿದರು.



## ಹೇಳುವ

- ಮನೆಗೆ ತಲುಪಿದ ಐನಾ ತಾಯಿಯೊಡನೆ ಏನು ಹೇಳಿರಬಹುದು?



## ಬರೆಯುವ

**ಕೆಳಗಿನ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.**

### ವಾಹನಗಳು

ಟುರು ಟುರು ಟುರು ಟುರು
ಬಂದಿತು ರಿಕ್ಷಾ ||
ಕಿಣಿ ಕಿಣಿ ಕಿಣಿ ಕಿಣಿ
ಬಂದಿತು ಸೈಕಲು ||

____________________

____________________

____________________

____________________

## ಅಡಗಿರುವುದೇನು?

**ಕೆಳಗೆ ಕೊಟ್ಟಿರುವ ಕೋಣೆಗಳಲ್ಲಿ ಅಡಗಿರುವ ವಾಹನಗಳಿಗೆ ಉರುಟು ಹಾಕಿ ಮಾದರಿಯಂತೆ ಬರೆಯಿರಿ.**

| | | | | | | | | |
|---|---|---|---|---|---|---|---|---|
| ಇ | ಗ | ಎ | ಗಾ | ಡಿ | ತ | ಲಾ | ರಿ | ಟೆಂ |
| ನ | ಮ | ತ್ತಿ | ಬ | ಸ್ಸು | ದ | ಬ | ಪೆ | ಪ್ರೊ |
| ವಿ | ಮಾ | ನ | ದಾ | ಡಿ | ಹ | ಡ | ಗು | ಲಿ |
| ಬೈ | ನ | ಗಾ | ದೋ | ಣಿ | ಕೆ | ಜ | ಡ | ಟ |
| ಕು | ರಿ | ಡಿ | ನೆ | ಜೀ | ಪು | ರಿ | ಕಾ | ರು |
| ರೈ | ಲು | ಬಂ | ಡಿ | ಬು | ಕೈ | ಗಾ | ಡಿ | ಸ್ಕೂ |
| ರಿ | ಮ | ಸ | ಹೆ | ಳಿ | ಗ | ಲು | ರ | ಟ |
| ಕ್ಸಾ | ಸೈ | ಕ | ಲು | ಹೆ | ಲಿ | ಕಾ | ಪ್ಟ | ರು |

| | | | |
|---|---|---|---|
| ಕೈಗಾಡಿ | | | |
| | | | |
| | | | |
| | | | |

# ಪದಬಂಧ

ಕೆಳಗಿನ ಸೂಚನೆಗಳನ್ನು ಓದಿ ಕೋಣೆಗಳಲ್ಲಿ ಸೂಕ್ತ ಪದಗಳನ್ನು ತುಂಬಿರಿ.

| | | | | | |
|---|---|---|---|---|---|
| 1 | | 2 ಏ | | | |
| 3 | ಕ್ಷಾ | | | | |
| | | 4 | | 5 | |
| 6 | | ಲು | | ಸ್ಸು | |
| | | | 7 | | 8 |
| 9 ಬೈ | | | ರು | | ಣಿ |

### ಎಡದಿಂದ ಬಲಕ್ಕೆ

2. ಆಕಾಶದಲ್ಲಿ ಹಾರುವೆ ಜನರನ್ನು ಒಯ್ಯುವೆ
3. ರಸ್ತೆಯಲ್ಲಿ ಓಡುವೆ ಮೂರು ಚಕ್ರಗಳಿವೆ.
6. ಎರಡು ಚಕ್ರಗಳಿವೆ. ಕಿಣಿ ಕಿಣಿ ಸದ್ದು ಮಾಡುವೆ.
9. ಎರಡು ಚಕ್ರಗಳಿವೆ. ಇಂಧನವಿದ್ದರೆ ಓಡುವೆ.

### ಮೇಲಿನಿಂದ ಕೆಳಗೆ


1. ಆರು ಚಕ್ರಗಳಿವೆ. ಸರಕು ಹೊತ್ತು ಸಾಗುವೆ.
4. ಚುಕು ಬುಕು ಸದ್ದು ಮಾಡುವೆ. ಹಳಿಗಳ ಮೇಲೆ ಓಡುವೆ.
5. ರಸ್ತೆಯಲ್ಲಿ ಚಲಿಸುವೆ. ಊರಿಂದ ಊರಿಗೆ ಸಾಗುವೆ.
7. ನಾಲ್ಕು ಚಕ್ರಗಳಿವೆ. ವೇಗವಾಗಿ ಓಡುವೆ.
8. ನೀರಿನ ಮೇಲೆ ತೇಲುವೆ. ಯಂತ್ರ ಇಲ್ಲದೆ ಸಾಗುವೆ.



## ಹಾಡುವ

# ವಿಧ ವಿಧ ಗಾಡಿ

ಸೈಕಲು ರಿಕ್ಷಾ ವಿಧ ವಿಧ ಕಾರು
ಸ್ಕೂಟರು ಮೋಟರು ಟುರು ಟುರು ಜೋರು
ಸರಕನು ಹೇರಿ ಸಾಗುವ ಲಾರಿ
ತರ ತರ ಬಣ್ಣದ ಬೈಕು ಸವಾರಿ
ಓಡುತಲಿರುವುದು ಉದ್ದದ ಬಸ್ಸು
ಜನರಿಗೆ ಹೋಗಲು ಅದುವೇ ಲೇಸು
ಚುಕುಬುಕು ಚುಕುಬುಕು ರೈಲಿನ ಗಾಡಿ
ಶಿಳ್ಳೆಯ ಹಾಕುತ ಸಾಗುವ ಮೋಡಿ
ಎತ್ತರ ಹಾರುವ ಹಕ್ಕಿ ವಿಮಾನ
ಎಂತಹ ಸೋಜಿಗ ಆಗಸ ಯಾನ
ಕಡಲಿನ ಅಲೆಗಳ ತಳ್ಳುತ ಹಡಗು
ತೇಲುತ ಸಾಗುವ ರಾಜನ ಬೆಡಗು
ಎಲ್ಲರು ಬನ್ನಿರಿ ಯಾನವ ಗೈಯುವ
ಖುಷಿಯಲಿ ಸುತ್ತುವ ಲೋಕವನು



## ಓದುವ



ಅಪ್ಪು ಮರದಡಿಯಲ್ಲಿ ಕುಳಿತಿದ್ದನು. ಆಗಸದಲ್ಲಿ ಹಕ್ಕಿಗಳು ಹಾರುತ್ತಿದ್ದುವು. ನಾನು ಹಕ್ಕಿಗಳ ಹಾಗೆ ಆಕಾಶದಲ್ಲಿ ಹಾರಿದರೆ....? ಅವನು ಚಿಂತಿಸುತ್ತಿದ್ದನು. ಆಗ ಆ ದಾರಿಯಾಗಿ ಐಂದ್ರಜಾಲಿಕನೊಬ್ಬ ಹೋಗುತ್ತಿದ್ದನು.



ಅಪ್ಪು ಅವನ ಬಳಿಗೆ ಹೋದನು. "ಐಂದ್ರಜಾಲಿಕರೇ ನಿಮಗೆ ವಂದನೆಗಳು. ನನಗೆ ಆಗಸದಲ್ಲಿ ಹಕ್ಕಿಯಂತೆ ಹಾರುವ ಆಸೆ. ನನಗೆ ಸಹಾಯ ಮಾಡುವಿರಾ?" ಎಂದು ಕೇಳಿದನು. ಐಂದ್ರಜಾಲಿಕನು ಒಂದು ಕಲ್ಲನ್ನು ಕೊಟ್ಟನು.



ಕೂಡಲೇ ಅದು ಕೀಲು ಕುದುರೆಯಾಯಿತು. "ಪುಟ್ಟಾ, ಇದರ ಮೇಲೆ ಕುಳಿತು 'ಹಾರು ಕುದುರೆ' ಎಂದರೆ ಕುದುರೆ ಹಾರುವುದು. 'ನಿಲ್ಲು ಕುದುರೆ'ಎಂದರೆ ನಿಲ್ಲುವುದು. ಕೀಲಿಯನ್ನು ಹಿಂದೆ ಮುಂದೆ ಮಾಡಿದರೆ ಆಚೆ ಈಚೆ ತಿರುಗುವುದು. ಇದರ ಸಹಾಯದಿಂದ ತೊಂದರೆಯಲ್ಲಿ ಇರುವವರನ್ನು ಕಾಪಾಡು. ನಿನಗೆ ಒಳ್ಳೆಯದಾಗಲಿ." ಎಂದು ಅವನು ಹೇಳಿದನು.



ಅಪ್ಪುವಿಗೆ ಖುಷಿಯೋ ಖುಷಿ. ಕುದುರೆ ಮೇಲೆ ಕುಳಿತು 'ಹಾರು ಕುದುರೆ' ಎಂದನು. ಕುದುರೆ ಆಗಸದಲ್ಲಿ ಹಾರಿತು. "ಆಹಾ...! ಹೊ...ಹೋ!" ಎಂದು ಸಂತೋಷದಿಂದ ಕೂಗಿದನು. ಕುದುರೆ ಬಯಲ ಮೇಲೆ ಸುತ್ತಲೂ ಹಾರಿತು. 'ನಿಲ್ಲು ಕುದುರೆ' ಎಂದನು.



ಕುದುರೆ ಬಯಲಲ್ಲಿ ಇಳಿಯಿತು. ಆಗ ಅವನ ಗೆಳತಿ ಪಮ್ಮಿ ಅಲ್ಲಿಗೆ ಬಂದಳು. ಅವಳು ಕೀಲು ಕುದುರೆಯ ಬಗ್ಗೆ ತಿಳಿದಳು. ಅವಳಿಗೂ ಕುದುರೆಯ ಮೇಲೆ ಕುಳಿತು ಸವಾರಿ ಮಾಡಬೇಕೆಂಬ ಆಸೆಯಾಯಿತು. "ಅಪ್ಪು ನಾನು ಈ ಕುದುರೆ ಮೇಲೆ ಕುಳಿತು ಸವಾರಿ ಮಾಡಲೇ?" ಎಂದು ಕೇಳಿದಳು. ಆಗ ಅಪ್ಪು "ಇದು ನನ್ನ ಕುದುರೆ ನಿನಗೆ ಕೊಡುವುದಿಲ್ಲ" ಎಂದನು. ಪಮ್ಮಿಗೆ ದುಃಖವಾಯಿತು.





ದಿನಗಳು ಕಳೆದುವು.ಒಂದು ದಿನ ಅಪ್ಪು ಕುದುರೆಯ ಮೇಲೆ ಕುಳಿತು ಸಮೀಪದ ಕಾಡಿನತ್ತ ಹಾರಿದನು. ಕೆಳಗೆ ವಿಶಾಲವಾದ ಗದ್ದೆಗಳು, ಮೇಯುತ್ತಿರುವ ಜಾನುವಾರುಗಳು, ಆಡುತ್ತಿರುವ ಮಕ್ಕಳು ಎಲ್ಲವನ್ನೂ ನೋಡುತ್ತಾ ಸಾಗುತ್ತಿದ್ದನು.



ದಾರಿಯಲ್ಲಿ ಗಿಡಗವೊಂದು ಕೋಳಿಮರಿಯನ್ನು ಕಚ್ಚಿಕೊಂಡು ಹೋಗುತ್ತಿತ್ತು. ಅಪ್ಪು ಇದನ್ನು ನೋಡಿಯೂ ಸಹಾಯ ಮಾಡದೆ ಮುಂದೆ ಹೋದನು. ಕುದುರೆ ವೇಗವಾಗಿ ಹಾರುತ್ತಿತ್ತು. ಅದು ಕಾಡಿನೊಳಗೆ ನುಗ್ಗಿಯೇ



ಬಿಟ್ಟಿತು. ಎದುರು ದೊಡ್ಡ ಬಂಡೆ ಇತ್ತು. "ಠಪ್..." ಕುದುರೆ ಬಂಡೆಗೆ ಬಡಿಯಿತು. ಅಪ್ಪು ಉರುಳುತ್ತಾ ಕೆಳಗೆ ಬಿದ್ದನು. ಅವನು ನೋವಿನಿಂದ ಚೀರಿದನು. ಅಮ್ಮನೊಡನೆ ಕಟ್ಟಿಗೆ ಸಂಗ್ರಹಿಸಲು ಬಂದ ಪಮ್ಮಿಗೆ ಅಪ್ಪುವಿನ ಚೀರಾಟ ಕೇಳಿಸಿತು. ಅತ್ತ ಕಡೆ ಓಡಿದಳು. ಅಪ್ಪುವಿನ ಮೈಯೆಲ್ಲ ಗಾಯವಾಗಿ ರಕ್ತ ಸುರಿಯುತ್ತಿತ್ತು. ಪಮ್ಮಿ ಅಮ್ಮನನ್ನು





ಕರೆದಳು. ಇಬ್ಬರೂ ಸೇರಿ ಮೂಲಿಕೆ ಔಷಧ ಹಚ್ಚಿದರು. ಆಗ ಅಪ್ಪುವಿಗೆ ತನ್ನ ತಪ್ಪಿನ ಅರಿವಾಯಿತು.


# ಪಾಠ – 9

# ಹಲೋ.... ಹಲೋ......




ಆಹಾ! ಇಂದು ಒಳ್ಳೆಯ ಔತಣ ಸಿಕ್ಕಿತು.


ಅಯ್ಯೋ! ಬಿಲ್ಲು ಬೆಕ್ಕು
ಥೂ! ಹಾಳು ಮೊಬೈಲು
ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ...

## ಹೇಳುವ

- ‘ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ....’ ಎಂದು ಹಾಡಿದ್ದು ಯಾವುದು?
- ‘ಥೂ! ಹಾಳು ಮೊಬೈಲು’ ಎಂದು ಬೆಕ್ಕು ಹೇಳಿದ್ದು ಯಾಕಾಗಿರಬಹುದು?



‘ನನಗೆ ಕರೆ ಮಾಡಿದವರು ಯಾರು?’ ಬಿಲ್ಲು ಕಿಸೆಯಿಂದ ಮೊಬೈಲು ತೆಗೆದು ನೋಡಿತು.‘ಓ ಇದು ಮಲ್ಲು’

## ಓದುವ

ಬಿಲ್ಲು : ಹಲೋ....

ಮಲ್ಲು : ಹಲೋ.... ನೀನು ಏನು ಮಾಡುತ್ತಿರುವೆ?


ಬಿಲ್ಲು : ಯಾಕೆ? ನಿನಗೆ ಏನಾಗಬೇಕು? ನನಗೆ ಆಹಾರ ಸಿಗದಂತೆ ಮಾಡಿದೆ.

ಮಲ್ಲು : ನಿನಗೆ ಒಳ್ಳೆಯ ಸುದ್ದಿ ತಿಳಿಸೋಣ ಎಂದು ಕರೆದೆ.

ಬಿಲ್ಲು : ಒಳ್ಳೆಯ ಸುದ್ದಿಯೇ? ಏನದು?

ಮಲ್ಲು : ನೀನು ಬೇಗ ಮನೆಗೆ ಹೋಗಿ ಟಿ.ವಿ. ನೋಡು. ಇಲಿಗಳನ್ನು ಸುಲಭದಲ್ಲಿ ಹಿಡಿಯುವ ಉಪಾಯಗಳನ್ನು ತೋರಿಸುತ್ತಿದ್ದಾರೆ.

ಬಿಲ್ಲು : ಹೌದೇ! ನಾನು ಈಗಲೇ ಹೋಗಿ ನೋಡುತ್ತೇನೆ.



## ಹೇಳುವ

- ಮಲ್ಲು ಬಿಲ್ಲುವಿಗೆ ಫೋನು ಮಾಡಿದ್ದು ಯಾಕೆ?
- ಫೋನಿನಿಂದ ಯಾವ ಯಾವ ಪ್ರಯೋಜನಗಳಿವೆ?

## ಅಭಿನಯಿಸುವ

ಬೆಂಕಿಪೆಟ್ಟಿಗೆಗಳನ್ನು ಉಪಯೋಗಿಸಿ ಫೋನ್ ತಯಾರಿಸಿರಿ. ಬಳಿಕ ಆ ಫೋನ್ ಮೂಲಕ ಮಲ್ಲು ಮತ್ತು ಬಿಲ್ಲು ನಡುವಣ ಸಂಭಾಷಣೆಯನ್ನು ಅಭಿನಯಿಸಿರಿ.

## ಓದುವ




ಮೊಬೈಲು ಎಂದರೆ ಎಲ್ಲರಿಗೂ ಅಚ್ಚುಮೆಚ್ಚು.
ಇದನ್ನು ಸುಲಭದಲ್ಲಿ ಒಯ್ಯಬಹುದು.
ದೂರದ ಊರಿನಲ್ಲಿರುವ ನೆಂಟರೊಡನೆ
ಮಾತನಾಡಬಹುದು.
ಹಾಡು ಕೇಳಬಹುದು, ಆಟ ಆಡಬಹುದು.
ಫೋಟೋ ಕೂಡಾ ತೆಗೆಯಬಹುದು.
ಅದರಿಂದ ತುಂಬಾ ಉಪಯೋಗಗಳಿವೆ.

ಬಿಲ್ಲು ಮನೆಯೊಳಗೆ ಬಂದು ಟಿ.ವಿ. ಹಾಕಿತು. ಆಗ ವಾರ್ತೆಯು ಬರುತ್ತಿತ್ತು. 'ಇದು ಬೇಡ' ಎನ್ನುತ್ತಾ ಚಾನೆಲ್ ಬದಲಾಯಿಸಿತು. ಆಗ ಬೆಕ್ಕೊಂದು ಇಲಿಯನ್ನು ಓಡಿಸಿ ಹಿಡಿಯುವ ದೃಶ್ಯ ಕಂಡಿತು. 'ಹಾಂ! ಇದೇ ಬೇಕಾದುದು'. ಕಣ್ಣು ಬಾಯಿ ಬಿಟ್ಟು ಟಿ.ವಿ. ನೋಡತೊಡಗಿತು. ಇಲಿಗಳನ್ನು ಹಿಡಿಯುವ ಹಲವು ತಂತ್ರಗಳಿದ್ದುವು. ಬಿಲ್ಲುವಿಗೆ ತುಂಬ ಖುಷಿಯಾಯಿತು.



## ಹಾಡುವ ಅಭಿನಯಿಸುವ



ಇಲಿಯನು ತಿನ್ನದೆ ದಿನಗಳು ಆಯ್ತು
ಸಿಕ್ಕಿದ ಇಲಿಯೂ ತಪ್ಪಿಸಿ ಹೋಯ್ತು
ಕೈಕಟ್ಟಿ ಕುಳಿತರೆ ಸಾಗದು ಮುಂದು
ತಿನ್ನಲೆ ಬೇಕು ಇಲಿಯನು ಇಂದು
ಹೊಟ್ಟೆಯು ಆಗಲೆ ಹಸಿದಿದೆ ಬಹಳ
ಹಿಡಿಯಲು ಈಗಲೆ ಹಾಕುವೆ ಗಾಳ
ಸಿಕ್ಕಿತು ಎನಗೆ ತಕ್ಕ ಉಪಾಯ
ಬಯಸೆನು ನಾನು ಯಾರ ಸಹಾಯ

## ಹೇಳುವ

- ನೀವು ಟಿ.ವಿ. ನೋಡುತ್ತೀರಾ?
- ಎಷ್ಟು ಹೊತ್ತು ನೋಡುತ್ತೀರಿ?
- ಯಾವ ಯಾವ ಕಾರ್ಯಕ್ರಮಗಳನ್ನು ನೋಡುತ್ತೀರಿ?

## ಬರೆಯುವ

**ಟಿ.ವಿ.ಯ ಕುರಿತು ನಿಮಗೆ ತಿಳಿದ ವಿಚಾರಗಳನ್ನು ಬರೆಯಿರಿ.**





ಬಿಲ್ಲು ಅಡುಗೆ ಕೋಣೆಗೆ ಹೋಯಿತು. ಏನಾದರೂ ತಿಂಡಿ ಸಿಗುವುದೇ ಎಂದು ಯೋಚಿಸಿತು. ಪಾತ್ರೆಯ ಮುಚ್ಚಳ ತೆಗೆಯಿತು. "ಆಹಾ! ಎಂತಹಾ ಪರಿಮಳ!" ಅದು ಕೆಲವು ಗೋಳಿಬಜೆಗಳನ್ನು ತಿಂದಿತು. ಆಗ ಅದಕ್ಕೆ ಟಿ.ವಿ.ಯಲ್ಲಿ ನೋಡಿದ ತಂತ್ರಗಳ ನೆನಪಾಯಿತು. "ಆ ತಂತ್ರಗಳನ್ನು ಪ್ರಯೋಗಿಸಲು ಈ ಗೋಳಿಬಜೆ ಒಳ್ಳೆಯದು" ಎಂಬ ಯೋಚನೆ ಅದಕ್ಕೆ ಹೊಳೆಯಿತು.

ಕೂಡಲೇ ಗೋಳಿಬಜೆಯನ್ನು ತೆಗೆದುಕೊಂಡು ಅಟ್ಟವನ್ನು ಏರಿತು. ಅದನ್ನು ಗೋಡೆಯ ಮೂಲೆಯಲ್ಲಿ ಇಟ್ಟಿತು. ಬಳಿಕ ತೆಂಗಿನಕಾಯಿಗಳ ಹಿಂದೆ ಅಡಗಿ ಕುಳಿತಿತು.



## ಹೇಳುವ

- ಬಿಲ್ಲು ಮೂಲೆಯಲ್ಲಿ ಗೋಳಿಬಜೆಯನ್ನು ಇಟ್ಟು ಅಡಗಿ ಕುಳಿತದ್ದು ಯಾಕಾಗಿರಬಹುದು?



"ಪುಟ್ಟ ಹಕ್ಕಿ ಗೂಡಿನಿಂದ
ಇಣುಕಿ ನೋಡಿತು..."
ಎಂದು ರೇಡಿಯೋ
ಹಾಡುತ್ತಿತ್ತು. ಚಿಕ್ಕು
ಇಲಿಯು ಒರಗು
ಕುರ್ಚಿಯಲ್ಲಿ ಕುಳಿತು
ಹಾಡನ್ನು ಆಲಿಸುತ್ತಿತ್ತು.

## ಹಾಡುವ

**ಚಿಕ್ಕುವಿನ ರೇಡಿಯೋದಲ್ಲಿ ಬಂದ ಹಾಡು ಇಲ್ಲಿದೆ. ಇಂಪಾಗಿ ಹಾಡಿರಿ.**

### ಪುಟ್ಟ ಹಕ್ಕಿ

ಪುಟ್ಟ ಹಕ್ಕಿ
ಗೂಡಿನಿಂದ
ಇಣುಕಿ ನೋಡಿತು।
ಕಾಳು ಕಂಡು
ಹಾರಿ ಬಂದು
ಮನೆಯ ಹೊಕ್ಕಿತು।
ಅತ್ತ ಇತ್ತ
ಕತ್ತು ಸರಿಸಿ
ಸುತ್ತ ನೋಡಿತು।

ಸಣ್ಣ ಪುಟ್ಟ
ಕಾಳನೆಲ್ಲ
ಹೆಕ್ಕಿ ತಿಂದಿತು।
ಪುಟ್ಟದೊಂದು
ಹಾಡು ಹೇಳಿ
ನಕ್ಕು ನಲಿಯಿತು।
ಹೊರಗೆ ಬಂದು
ರೆಕ್ಕೆ ಬಡಿದು
ಹಾರಿ ಹೋಯಿತು।

–ಬಿ.ಕೆ. ರೋಹಿಣಿ

## ಬರೆಯುವ

- ಗೂಡಿನಿಂದ ಇಣುಕಿದ ಪುಟ್ಟ ಹಕ್ಕಿಗೆ ಏನು ಕಂಡಿತು?
- ____________________________________________
- ಕಾಳುಗಳನ್ನು ತಿಂದ ಬಳಿಕ ಹಕ್ಕಿ ಏನು ಮಾಡಿತು?
- ____________________________________________


## ಓದುವ

"ಆಹಾ! ಏನು ಪರಿಮಳ!" ಚಿಕ್ಕುವಿನ ಬಾಯಲ್ಲಿ ನೀರೂರಿತು. ರೇಡಿಯೋ ನಿಲ್ಲಿಸಿ ಪರಿಮಳ ಬಂದ ಕಡೆಗೆ ಹೊರಟಿತು. ಅದು ಮೂಸುತ್ತಾ ಹುಡುಕಿತು. ಮೂಲೆಯಲ್ಲಿ ಗೋಳಿಬಜೆಯನ್ನು ಕಂಡಿತು. 'ಹಾಯ್! ಗೋಳಿಬಜೆ!' ಒಂದೇ ಓಟದಲ್ಲಿ ಓಡಿ ಗೋಳಿಬಜೆಯನ್ನು ತಿನ್ನತೊಡಗಿತು.

## ಬರೆಯುವ

ಒತ್ತಕ್ಷರಗಳಿರುವ ಪದಗಳನ್ನು ಮೇಲಿನ ಪಾಠಭಾಗದಿಂದ ಹೆಕ್ಕಿ ಬರೆಯಿರಿ.

| | | |
|---|---|---|
| ಚಿಕ್ಕು | ________ | ________ |
| ________ | ________ | ________ |
| ________ | ________ | ________ |



"ಬಂದ! ಬಂದೇ ಬಿಟ್ಟ!

ಇದೇ ತಕ್ಕ ಸಮಯ"

ಚಿಕ್ಕು ಹೊಟ್ಟೆ ಎಳೆಯುತ್ತಾ

ಬಂದಿತು. ಚಕ್ಕನೆ

ಇಲಿಯನ್ನು ಹಿಡಿಯಿತು

"ಹ್ಹಹ್ಹ, ಸಿಕ್ಕಿಯೇ ಬಿಟ್ಟೆ. ಬಹಳ ದಿನಗಳಿಂದ ಕಾಯುತ್ತಾ ಇದ್ದೆ" ಇಲಿಯನ್ನು ಹಿಡಿದುಕೊಂಡು ಬಿಲ್ಲು ಅಡುಗೆ ಕೋಣೆಗೆ ಬಂದಿತು. ಚಿಕ್ಕು ಇಲಿಯನ್ನು ಭರಣಿಯೊಳಗೆ ಹಾಕಿ ಮುಚ್ಚಿತು. ಅಡುಗೆಗೆ ತಯಾರಿ ಮಾಡತೊಡಗಿತು.

## ಬರೆಯುವ

**ಕೆಳಗಿನ ಪದಗಳನ್ನು ಬಿಟ್ಟ ಸಾಲುಗಳಲ್ಲಿ ತುಂಬಿಸಿ ಪದ್ಯವನ್ನು ಪೂರ್ತಿಗೊಳಿಸಿರಿ.**

ಒಲೆಯಲಿಟ್ಟಿತು ಹಿಡಿದುಬಿಟ್ಟಿತು ಮುಚ್ಚಿ ಇಟ್ಟಿತು

| | | |
|---|---|---|
| ಬಿಲ್ಲು ಚಿಕ್ಕು | ಅದನು ತಂದು | ಪಾತ್ರೆ ತೊಳೆದು |
| ಚಿಕ್ಕು ಇಲಿಯ | ಪಾತ್ರೆಯೊಳಗೆ | ನೀರು ತುಂಬಿ |
| ...................... | ...................... | ...................... |



ಬಿಲ್ಲುವಿಗೆ ತುಂಬಾ ಸಂತೋಷ. ಅದು ಹಾಡುತ್ತಾ ಮಸಾಲೆ ಅರೆಯತೊಡಗಿತು.

## ಹಾಡುವ

### ಬೆಕ್ಕಿಗೆ ಆಟ

ಹಿಡಿದೆನೊಂದು ಇಲಿಯನಿಂದು
ಬಹಳ ಕಷ್ಟದಿ ।
ಅಡುಗೆ ಮಾಡಿ ತಿನುವೆನಿದನು
ತುಂಬ ಇಷ್ಟದಿ ।
ಕೆಲವು ದಿನಗಳಿಂದ ಇಲಿಯ
ನೋಡುತಿದ್ದೆನು ।
ಕೈಗೆ ಸಿಗದೆ ಓಡಿ ಹೋಗಿ
ಸೋಲುತಿದ್ದೆನು ।
ಇಂದು ನನ್ನ ಪ್ರಯತ್ನವೆಲ್ಲ
ಸಫಲವಾಯಿತು ।
ಅಡಗಿ ಕುಳಿತ ಇಲಿಯ ಆಟ
ವಿಫಲವಾಯಿತು ।

## ಹೇಳುವ

ಚಿತ್ರವನ್ನು ನೋಡಿ ಕಥೆ ಮುಂದುವರಿಸಿ ಹೇಳಿರಿ.









## ಬರೆಯುವ

**ಕಥೆಯ ಪ್ರಧಾನ ಆಶಯಗಳನ್ನು ಹಿಂದೆ ಮುಂದೆ ಮಾಡಿ ಕೆಳಗೆ ಕೊಡಲಾಗಿದೆ. ಅವುಗಳನ್ನು ಕ್ರಮೀಕರಿಸಿ ಬರೆಯಿರಿ.**

- ಅಟ್ಟದಲ್ಲಿ ಇಲಿಗಳು ಚರ್ಚಿಸಿದವು.
- ತೆಂಗಿನಕಾಯಿ ಕುದಿಯುತ್ತಿರುವ ನೀರಿಗೆ ಬಿತ್ತು.
- ಚಿಕ್ಕು ಭರಣಿಯಿಂದ ಜಿಗಿದು ಅಟ್ಟಕ್ಕೆ ಓಡಿತು.
- ಬಿಸಿನೀರು ಬಿಲ್ಲುವಿನ ಮೈಮೇಲೆ ಚೆಲ್ಲಿತು.
- ಇಲಿಗಳು ಬೆಕ್ಕಿನ ಮೇಲೆ ತೆಂಗಿನಕಾಯಿಯನ್ನು ಹಾಕಿದುವು.
- ಗೆಳೆಯರೊಡನೆ ನಡೆದ ಸಂಗತಿ ತಿಳಿಸಿತು.

ಬಿಲ್ಲುವಿನ ಚೀರಾಟ ಕೇಳಿದ ಗೆಳೆಯರು ಓಡಿ ಬಂದರು. ಬಿಲ್ಲು ನೆಲದ ಮೇಲೆ ಬಿದ್ದಿತ್ತು. ಅದರ ಮೈಮೇಲೆ ಸುಟ್ಟಗಾಯಗಳಾಗಿದ್ದುವು. ಗೆಳೆಯರು ಬಿಲ್ಲುವನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿದರು.




## ಓದುವ

ಡಾಕ್ಟರ್ ಹುಲಿರಾಯರು ಬಂದರು.

ಬಿಲ್ಲುವನ್ನು ಪರೀಕ್ಷಿಸಿ ನೋಡಿದರು.

“ಅಬ್ಬಾ! ತುಂಬಾ ಗಾಯಗಳಾಗಿವೆ” ಎಂದರು.

ಚೀಟಿಯಲ್ಲಿ ಔಷಧಿಗಳನ್ನು ಬರೆದರು.

ನೀತು ಜಿಂಕೆಯು ಬಿಲ್ಲುವಿಗೆ ಸೂಜಿ ಚುಚ್ಚಿದಳು.

ಮೈಗೆ ಮುಲಾಮು ಹಚ್ಚಿದಳು.




ಮರುದಿನ, 'ಇಲಿಗಳ ದಾಳಿ, ಬಿಲ್ಲು ಬೆಕ್ಕಿಗೆ ಗಂಭೀರ ಗಾಯ' ಎಂದು ಕೂಗುತ್ತಾ ಟಾಮಿ ನಾಯಿಯು ಪೇಪರು ಮಾರುತ್ತಾ ಬಂತು. ಮಲ್ಲುವಿಗೆ ಗಾಬರಿಯಾಯಿತು. ಅದು ಪೇಪರು ತೆಗೆದುಕೊಂಡು ಓದತೊಡಗಿತು.

**ಓದುವ**

## ವನವಾಣಿ

### ಇಲಿಗಳ ದಾಳಿ; ಬೆಕ್ಕಣ್ಣ ಗಂಭೀರ

ಇಲಿವನ : ಇಲ್ಲಿಗೆ ಸಮೀಪದ 'ಮುಳ್ಳುಕಂಡ'ದಲ್ಲಿರುವ ಬಿಲ್ಲು ಬೆಕ್ಕಿನ ಮೇಲೆ ಇಲಿಗಳು ದಾಳಿ ನಡೆಸಿದವು. ಅಟ್ಟದಲ್ಲಿದ್ದ ಇಲಿಗಳು ಬೆಕ್ಕಿನ ಮೇಲೆ ತೆಂಗಿನ ಕಾಯಿಯನ್ನು ಹಾಕಿದುವು. ಆದರೆ ಅದು ನೀರು ಕುದಿಯುತ್ತಿರುವ ಪಾತ್ರೆಗೆ ಬಿತ್ತು. ಬಿಸಿನೀರು ಬಿಲ್ಲುವಿನ ಮೇಲೆ ಬಿದ್ದು ಗಂಭೀರ ಸುಟ್ಟಗಾಯಗಳಾಗಿವೆ. ಬಿಲ್ಲುವಿನ ಗೆಳೆಯರು ಕೂಡಲೇ ಆಸ್ಪತ್ರೆಗೆ ಸಾಗಿಸಿದ ಕಾರಣ ಅದರ ಜೀವಕ್ಕೆ ಹಾನಿಯಿಲ್ಲ.





ವಾರ್ತೆ ಓದಿದ  ಮಲ್ಲುವಿಗೆ ಆಘಾತವಾಯಿತು. ಅದು ಬಿಲ್ಲುವನ್ನು ನೋಡಲು ಆಸ್ಪತ್ರೆಗೆ ಬಂದಿತು. ನೋಡುವುದೇನು? ಮೈ ತುಂಬಾ ಸುಟ್ಟಗಾಯಗಳಿರುವ ಬಿಲ್ಲುವನ್ನು ಮಂಚದಲ್ಲಿ ಮಲಗಿಸಿದ್ದರು. "ಬಿಲ್ಲು...." ಗಾಬರಿಯಿಂದ ಮಲ್ಲು ಕರೆಯಿತು. ಬಿಲ್ಲು ಕಣ್ಣು ತೆರೆಯಿತು.



## ಬರೆಯುವ

ಮಲ್ಲು ಮತ್ತು ಬಿಲ್ಲುವಿನ ನಡುವೆ ನಡೆದ ಸಂಭಾಷಣೆ ಬರೆಯಿರಿ.

ಮಲ್ಲು : ಇದೇನು! ತುಂಬಾ ಗಾಯಗಳಾಗಿವೆಯಲ್ಲಾ?

ಬಿಲ್ಲು : ...............................................

ಮಲ್ಲು : ನಿನ್ನನ್ನು ಇಲ್ಲಿಗೆ ಹೊತ್ತುಕೊಂಡು ಬಂದವರು ಯಾರು?

ಬಿಲ್ಲು : ...............................................

ಮಲ್ಲು : ಇಲ್ಲಿ ಚೆನ್ನಾಗಿ ಆರೈಕೆ ಮಾಡುತ್ತಾರೆಯೇ?

ಬಿಲ್ಲು : ...............................................

ಮಲ್ಲು : ಅಂತೂ ಜೀವ ಉಳಿಯಿತಲ್ಲ. ನೀನೇನೂ ಚಿಂತಿಸಬೇಡ. ನಾವು ಜೊತೆಯಾಗಿ ಆ ಇಲಿಗಳಿಗೆ ಪಾಠ ಕಲಿಸುವ.



ದಿನಗಳು ಕಳೆದುವು. ಬಿಲ್ಲು ಗುಣವಾಗಿ ಮನೆಗೆ ಮರಳಿತು. ಮಲ್ಲು ಬಿಲ್ಲುವನ್ನು ಕಾಣಲು ಬಂದಿತು. ಅವುಗಳು ಇಲಿಗಳನ್ನು ಹಿಡಿಯುವ ಬಗ್ಗೆ ಮಾತನಾಡತೊಡಗಿದುವು.

## ಓದುವ

ಮಲ್ಲು : ನಿನ್ನಲ್ಲಿ ಕಂಪ್ಯೂಟರ್ ಇದೆಯಲ್ಲ?

ಬಿಲ್ಲು : ಇದೆ. ಯಾಕೆ?

ಮಲ್ಲು : ಅದರಲ್ಲಿ ಹುಡುಕಿದರೆ ಬೇರೆ ಒಳ್ಳೆಯ ಉಪಾಯಗಳು ಸಿಗಬಹುದು.

ಬಿಲ್ಲು : ಆ ಉಪಾಯಗಳಿಂದ ನಮಗೆ ಅಪಾಯ ಇಲ್ಲವಲ್ಲ.

ಮಲ್ಲು : ಇಲ್ಲ. ಇಲಿಗಳಿಗೆ ತಪ್ಪಿಸಿಕೊಳ್ಳಲೂ ಆಗದು.


ಬಿಲ್ಲು : ಹಾಗಾದರೆ ಕಂಪ್ಯೂಟರಿನಲ್ಲಿ ಹುಡುಕೋಣ.



ಕಂಪ್ಯೂಟರ್‌ನಲ್ಲಿ ಇಲಿ ಹಿಡಿಯುವ ಹಲವು ತಂತ್ರಗಳಿದ್ದುವು. ಬಿಲ್ಲು ಮತ್ತು ಮಲ್ಲು ಒಂದೊಂದನ್ನೂ ಆಸಕ್ತಿಯಿಂದ ನೋಡುತ್ತಿದ್ದುವು. ಅವುಗಳಿಗೆ ಹೊರಗೆ ಏನಾಗುತ್ತಿದೆ ಎಂಬುದೂ ತಿಳಿಯುತ್ತಿರಲಿಲ್ಲ. ಮೋಡ ಮುಸುಕಿ ಮಳೆ ಹನಿಯಲು ತೊಡಗಿತು. ಫಳಕ್... ಫಳಕ್... ಮಿಂಚು ಮಿಂಚಿತು. ಅದರೊಂದಿಗೆ ಛಟ ಛಟ ಛಟಾಲ್ ಎಂದು ನೆಲವೇ ಒಡೆಯುವಂಥ ಸಿಡಿಲು..... ಪುಸ್‌ಸ್‌ಸ್... ಕಂಪ್ಯೂಟರ್ ಸುಟ್ಟು ಹೋಯಿತು.

## ಹೇಳುವ

- ಕಂಪ್ಯೂಟರ್ ಸುಟ್ಟು ಹೋಗಲು ಕಾರಣವೇನು?
- ನಿಮ್ಮ ಮನೆಯಲ್ಲಿ ಈ ರೀತಿ ಆಗಿದೆಯೇ?




## ಓದುವ

ನಾನು ಯಾರೆಂದು ತಿಳಿಯಿತೇ? ಮನೆಗಳಲ್ಲಿ, ಶಾಲೆಗಳಲ್ಲಿ, ಕಛೇರಿಗಳಲ್ಲಿ ಹೀಗೆ ಎಲ್ಲ ಕಡೆ ನಾನಿರುವೆ. ಚಿಣ್ಣರು ನನ್ನ ಎದುರು ಕುಳಿತು ಆಡಲು ತೊಡಗಿದರೆ ಲೋಕವನ್ನೇ ಮರೆಯುತ್ತಾರೆ. ನಾನು ಹಾಡುಗಳನ್ನು ಹಾಡುತ್ತೇನೆ, ಸಿನೇಮಾವನ್ನು ತೋರಿಸುತ್ತೇನೆ. ಮಾಹಿತಿಗಳನ್ನು ನೀಡುತ್ತೇನೆ ಮತ್ತು ತೆಗೆದುಕೊಳ್ಳುತ್ತೇನೆ. ನನ್ನ ಮೂಲಕ ಸಂದೇಶಗಳನ್ನು ಎಲ್ಲಿಗೆ ಬೇಕಾದರೂ ಕಳುಹಿಸಬಹುದು. ಹಲವು ವಿಷಯಗಳನ್ನು ನೆನಪಿನಲ್ಲಿ ಇಡುತ್ತೇನೆ. ಇದರಿಂದಾಗಿಯೇ ಎಲ್ಲರಿಗೂ ನಾನು ಅಚ್ಚುಮೆಚ್ಚು.

# ಈ ಜಗ




ಪ್ರತಿದಿನ ವಾರ್ತೆಯ
ತಿಳಿಯಲು ತಂದೆಯು
ತಪ್ಪದೆ ಪತ್ರಿಕೆ ಓದುವರು



ಅಡುಗೆಯ ಮಾಡುತ
ರೇಡಿಯೊದಲ್ಲಿ
ಅಮ್ಮನು ಹಾಡನು ಕೇಳುವಳು



ಸಮಯದ ಪರಿವೆಯೆ
ಇಲ್ಲದೆ ತಮ್ಮನು
ಟೀವಿಯ ಮುಂದೆ ಕೂರುವನು



ಅಕ್ಕನು ವಿಧ ವಿಧ
ಕೆಲಸವ ಮಾಡಲು
ಕಂಪ್ಯೂಟರನ್ನು ಬಳಸುವಳು



ಅಪ್ಪನ ಫೋನನು
ಮೆಲ್ಲಗೆ ತೆಗೆದು
ಗೆಳೆಯರ ಜೊತೆ ನಾ ಹರಟುವೆನು

ಪತ್ರಿಕೆ ಫೋನು
ರೇಡಿಯೊ ಟೀವಿ
ಕಂಪ್ಯೂಟರಲ್ಲಿ ಈ ಜಗವು


ವಿವೇಕದಿಂದಲಿ
ಇವುಗಳ ಬಳಸಲು
ಮನುಕುಲ ಪ್ರಗತಿಯ ಕಾಣುವುದು

## ಪಾಠ – 10

# ನಮ್ಮ ಸಹಾಯಕರು


ಸೋಫಿಯಾ ಮತ್ತು ಸಂಧ್ಯಾ ಒಂದನೇ ವೇದಿಕೆಯ ಮುಂಭಾಗದಲ್ಲಿ ಕುಳಿತಿದ್ದರು. 'ಶಾಲಾ ಕಲೋತ್ಸವಕ್ಕೆ ಆಗಮಿಸಿದ ಎಲ್ಲರಿಗೂ ಸ್ವಾಗತ. ಈಗ ವಿವಿಧ ಸ್ಪರ್ಧೆಗಳು ಆರಂಭವಾಗಲಿವೆ. ಹೆಸರು ಕೊಟ್ಟವರು ತಮ್ಮ ತಮ್ಮ ವೇದಿಕೆಗಳ ಬಳಿಗೆ ಹೋಗಬೇಕು' ಅಧ್ಯಾಪಕರು ಮೈಕಿನಲ್ಲಿ ಕರೆದು ಹೇಳಿದರು.

"ಸೋಫೀ.... ಪದ್ಯರಚನೆ ಮೂರನೆಯ ವೇದಿಕೆಯಲ್ಲಿ ನೀನು ಅಲ್ಲಿಗೆ ಹೋಗು. ಮಧ್ಯಾಹ್ನ ಊಟಕ್ಕೆ ಒಟ್ಟಿಗೆ ಹೋಗೋಣ" ಸಂಧ್ಯಾ ಹೇಳಿದಳು.



## ಹೇಳುವ

- ನಿಮ್ಮ ಶಾಲೆಯ ಕಲೋತ್ಸವದಲ್ಲಿ ಯಾವ ಯಾವ ಸ್ಪರ್ಧೆಗಳು ನಡೆಯುತ್ತವೆ?



‘ಈಗ ಒಂದನೇ ವೇದಿಕೆಯಲ್ಲಿ ಲಘು ಸಂಗೀತ ಸ್ಪರ್ಧೆ.
ಮೊದಲನೆಯದಾಗಿ ಸಂಧ್ಯಾ’
ಮೈಕಿನಲ್ಲಿ ತನ್ನ ಹೆಸರು ಕರೆದುದನ್ನು
ಕೇಳಿ ಸಂಧ್ಯಾ ವೇದಿಕೆಗೆ ಹೋದಳು.
ಹಾಡು ಹಾಡಿದಳು.



## ಹಾಡುವ

ಕೋಳಿ ಕೂಗಿತೇಳು ಕಂದ
ಸೂರ್ಯ ಪೂರ್ವದಲ್ಲಿ ಬಂದ
ಹೆಚ್ಚು ಮಲಗಲೇನು ಚಂದ
ಬಾ ಕಂದ ಬಾ ಬಾ ಕಂದ ಬಾ
ಹಲ್ಲನ್ನುಜ್ಜಿ ತಿಂಡಿ ತಿಂದು
ಪಾಠ ಓದಿ ಬಳಿಕ ಮಿಂದು
ಊಟ ಮಾಡಿ ಶಾಲೆಗೆಂದು
ಬಾ ಕಂದ ಬಾ ಬಾ ಕಂದ ಬಾ



'ಮಧ್ಯಾಹ್ನ ಊಟದ ನಂತರ ಕಾರ್ಯಕ್ರಮಗಳು ಮುಂದುವರಿಯುತ್ತವೆ' ಮೈಕಿನಲ್ಲಿ ಹೇಳಿದರು. ಸೋಫಿಯಾಳ ತಂದೆ, ತಾಯಿ, ಸಂಧ್ಯಾಳ ತಾಯಿ ಹಾಗೂ ಗೆಳೆಯರ ಅಪ್ಪ ಅಮ್ಮಂದಿರು ಎಲ್ಲರೂ ಬಂದಿದ್ದರು. ಮಕ್ಕಳೆಲ್ಲ ಊಟಕ್ಕೆ ಕುಳಿತರು. ಅಧ್ಯಾಪಕರೂ ಹೆತ್ತವರೂ ಸೇರಿ ಮಕ್ಕಳಿಗೆ ಊಟ ಬಡಿಸಿದರು.


## ಹೇಳುವ

- ಶಾಲೆಯ ಕಲೋತ್ಸವದಂದು ಮಧ್ಯಾಹ್ನದ ಊಟಕ್ಕೆ ಯಾರು ಯಾರು ಸಹಾಯ ಮಾಡಿದರು?
- ನಿಮ್ಮ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಯಾರು ಯಾರು ಸಹಾಯ ಮಾಡುತ್ತಾರೆ?



## ಬರೆಯುವ

**ಶಾಲೆಗೆ ಸಂಬಂಧಿಸಿದ ಪದಗಳನ್ನು ಬರೆದು ಪದಚಕ್ರ ಪೂರ್ತಿಗೊಳಿಸಿರಿ.**




ಸೋಫಿಯಾ ಮತ್ತು ಸಂಧ್ಯಾ ಊಟ ಮಾಡಿ ಕೈ ತೊಳೆದರು.

"ಸೋಫಿ..... ಪದ್ಯ ರಚನೆಗೆ ಯಾವ ವಿಷಯ ಕೊಟ್ಟಿದ್ದರು?" ಸಂಧ್ಯಾ ಕೇಳಿದಳು.

"ನಮ್ಮ ಶಾಲೆ" ಸೋಫಿಯ ಹೇಳಿದಳು.

'ಎರಡನೇ ವೇದಿಕೆಯಲ್ಲಿ ಇನ್ನು ಮುಂದೆ ಗಾನಮೇಳ ಸ್ಪರ್ಧೆ ನಡೆಯಲಿದೆ' ಮೈಕಿನಲ್ಲಿ ಹೇಳಿದರು.




## ಬರೆಯುವ

**ಸರಿಯಾದ ಪದವನ್ನು ಹುಡುಕಿ ಬರೆಯಿರಿ.**

ಸಾಲೆ, ಶಾಳೆ, ಶಾಲೆ, ಷಾಲೆ

ಪಾಟ, ಪಠ, ಪಟ, ಪಾಠ

ಕೊನೆಯದಾಗಿ ಬಹುಮಾನ ವಿತರಣೆ. ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರು ಬಹುಮಾನ ವಿತರಿಸಿದರು. ಲಘು ಸಂಗೀತ ಪ್ರಥಮ ಬಹುಮಾನ ಸಂಧ್ಯಾ. ದ್ವಿತೀಯ ಬಹುಮಾನ ಶಬಾನ. ಪದ್ಯರಚನೆ ಪ್ರಥಮ ಬಹುಮಾನ ಸೋಫಿಯಾ. ದ್ವಿತೀಯ ಬಹುಮಾನ ಮನು. ಕಥಾರಚನೆ ಪ್ರಥಮ ಬಹುಮಾನ ರಾಜು.... ಸ್ಪರ್ಧೆಗಳಲ್ಲಿ ಗೆದ್ದವರೆಲ್ಲರೂ ಬಹುಮಾನಗಳನ್ನು ಪಡೆದುಕೊಂಡರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



ಸೋಫಿಯಾ ಮತ್ತು ಸಂಧ್ಯಾ ಬಹುಮಾನಗಳನ್ನು ಕೈಯಲ್ಲಿ ಹಿಡಿದುಕೊಂಡು ಕುಣಿದಾಡುತ್ತಾ ಮನೆಯ ಕಡೆಗೆ ನಡೆದರು. "ಅಪ್ಪಾ ಇಲ್ಲಿ ನೋಡಿ. ನನಗೆ ಪದ್ಯರಚನೆಗೆ ಪ್ರಥಮ ಬಹುಮಾನ ಸಿಕ್ಕಿದೆ" ಸೋಫಿಯಾ ಹೇಳಿದಳು. ಪುಸ್ತಕ ಓದುತ್ತಾ ಕುಳಿತಿದ್ದ ಅಪ್ಪ ಪುಸ್ತಕ ಮುಚ್ಚಿಟ್ಟು ಸೋಫಿಯಾಳ ಬಳಿಗೆ ಬಂದರು. "ಹೌದೇ ತುಂಬಾ ಸಂತೋಷ" ಅಪ್ಪ ಸೋಫಿಯಾಳ ಬೆನ್ನು ತಟ್ಟಿದರು.



## ಓದುವ

| | |
|---|---|
| ಸೂರ್ಯ | ಪ್ರಾರ್ಥನೆ |
| ಪೂರ್ವ | ಸಂದರ್ಭ |
| ಸ್ಪರ್ಧೆ | ಮಧ್ಯಾಹ್ನ |
| ಕಾರ್ಯಕ್ರಮ | ಲಘು ಸಂಗೀತ |

## ಬರೆಯುವ

**ಅಕ್ಷರಗಳನ್ನು ಕ್ರಮೀಕರಿಸಿ ಸರಿಯಾದ ಪದ ಬರೆಯಿರಿ.**

| | | | | | |
|---|---|---|---|---|---|
| ದಿ | ವೇ | ಕೆ | | | |
| ವ | ಲೋ | ಕ | ತ್ಸ | | |
| ಕ್ರ | ರ್ಯ | ಮ | ಕಾ | | |
| ತ | ಲ | ಸಂ | ಘು | ಗೀ | |

"ಸೋಫಿ.... ನೀನು ಬರೆದ ಪದ್ಯವನ್ನು ಒಂದು ಬಿಳಿ ಕಾಗದದಲ್ಲಿ ಬರೆದು ಪತ್ರಿಕೆಗೆ ಕಳುಹಿಸು" ಅಪ್ಪ ಹೇಳಿದರು. "ಅಪ್ಪಾ... ಪತ್ರಿಕೆಗೆ ಕಳುಹಿಸುವುದು ಹೇಗೆ?"

"ಬಸ್ಸು ನಿಲ್ದಾಣದ ಬಳಿಯಲ್ಲಿ ಅಂಚೆ ಕಛೇರಿ ಇದೆಯಲ್ಲ. ನಾಳೆ ಬೆಳಿಗ್ಗೆ ಅಲ್ಲಿಗೆ ಹೋಗಿ ಒಂದು ಕವರು ತೆಗೆದುಕೊಂಡು ಬಾ. ಬರೆದ ಪದ್ಯವನ್ನು ಕವರಿನ ಒಳಗೆ ಹಾಕಿ ಮೇಲೆ ಪತ್ರಿಕೆಯ ವಿಳಾಸ ಬರೆಯಬೇಕು. ಆಮೇಲೆ ಅಂಚೆ ಕಛೇರಿಯ ಮುಂಭಾಗದಲ್ಲಿರುವ ಅಂಚೆ ಪೆಟ್ಟಿಗೆಗೆ ಹಾಕಬೇಕು" ಅಪ್ಪ ಹೇಳಿದರು.

## ಹೇಳುವ

- ಅಪ್ಪ ಸೋಫಿಯಾಳಲ್ಲಿ ಪದ್ಯವನ್ನು ಬರೆದು ಎಲ್ಲಿಗೆ ಕಳುಹಿಸಲು ಹೇಳಿದರು?
- ಕವರಿನ ಮೇಲೆ ಏನು ಬರೆಯಬೇಕು?
- ಕವರನ್ನು ಯಾವುದಕ್ಕೆ ಹಾಕಬೇಕು?

## ಬರೆಯುವ

**ಪದಗಳನ್ನು ಕ್ರಮೀಕರಿಸಿ ವಾಕ್ಯ ಬರೆಯಿರಿ.**

ಪುಸ್ತಕ / ಓದುತ್ತಿದ್ದರು / ಅಪ್ಪ

______________________________

ನಡೆದರು / ಮಕ್ಕಳು / ಮನೆಯ / ಕಡೆಗೆ

______________________________

ಬಳಿಯಲ್ಲಿ / ಶಾಲೆಯ / ಇದೆ / ಅಂಚೆ ಕಛೇರಿ

______________________________

ಸೋಫಿಯ ಅಂಚೆ ಕಛೇರಿಗೆ ಹೋದಳು. ''ಏನು ಬೇಕು ಮಗೂ?'' ಪೋಸ್ಟ್ ಮಾಸ್ಟರ್ ಕೇಳಿದರು. “ನನಗೊಂದು ಪೋಸ್ಟ್ ಕವರು ಬೇಕಿತ್ತು” ಸೋಫಿಯ ಹೇಳಿದಳು. ಪೋಸ್ಟ್ ಮಾಸ್ಟರ್ ಕವರು ಕೊಟ್ಟರು. ಸೋಫಿಯ ಐದು ರೂಪಾಯಿ ಕೊಟ್ಟಳು. ಮನೆಗೆ ಬಂದು ಪದ್ಯ ಬರೆದಳು.

## ಹಾಡುವ

### ನಮ್ಮ ಶಾಲೆ

ಎನಿತು ಚಂದದಿ ಕಾಣುತಿರುವುದು
ನಮ್ಮ ಊರಿನ ಶಾಲೆಯು
ಶಾಲೆ ಪಕ್ಕದಿ ಅರಳಿ ನಿಂತಿವೆ
ವಿವಿಧ ರೀತಿಯ ಹೂಗಳು
ಆಟ ಆಡುತ ಪಾಠ ಕೇಳುತ
ಪದ್ಯ ಹಾಡುತ ಕಲಿವೆವು
ನಮಗೆ ಕಲಿಸುವ ಗುರುಗಳಲ್ಲಿ
ಎಲ್ಲರಿಗು ಅತಿ ಪ್ರೀತಿಯು
ವಿದ್ಯೆ ಬುದ್ಧಿಯ ನಮಗೆ ನೀಡುವ
ನಮ್ಮ ಶಾಲೆಯು ಶ್ರೇಷ್ಠವು



## ಬರೆಯುವ

**ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಪದ್ಯದ ಸಾಲುಗಳನ್ನು ಬರೆಯಿರಿ.**

(ಆಟ, ಊಟ, ಕಥೆ, ಪದ್ಯ, ಪಾಠ, ಟೀಚರು, ಹೂತೋಟ)

### ಅಂದದ ಶಾಲೆ

ಶಾಲೆ ನಮ್ಮ ಶಾಲೆ

ನೋಡು ನಮ್ಮ ಶಾಲೆ

ದೊಡ್ಡದಾದ ಶಾಲೆ

ಚಂದವಿರುವ ಶಾಲೆ

______________________________

______________________________

______________________________

______________________________

ಸೋಫಿಯ ಪದ್ಯವನ್ನು ಬರೆದು ಕವರಿನ ಒಳಗೆ ಹಾಕಿ ಅಂಟಿಸಿದಳು. ಕವರಿನ ಮೇಲೆ ವಿಳಾಸ ಬರೆದಳು.

"ಅಮ್ಮಾ ನಾನು ಈ ಕವರನ್ನು ಅಂಚೆ ಪೆಟ್ಟಿಗೆಗೆ ಹಾಕಿ ಶಾಲೆಗೆ ಹೋಗುತ್ತೇನೆ" ಸೋಫಿಯ ಹೇಳಿದಳು.

"ಸಂಧ್ಯಳನ್ನು ಜತೆಯಲ್ಲಿ ಕರೆದುಕೋ" ಅಮ್ಮ ಹೇಳಿದರು.

"ಅಮ್ಮಾ, ನಾನು ಸಂಜೆ ಶಾಲೆ ಬಿಟ್ಟ ಮೇಲೆ ಸಂಧ್ಯಳ ಮನೆಗೆ ಹೋಗಿ ಬರುತ್ತೇನೆ."

"ಆಗಲಿ" ಅಮ್ಮ ಹೇಳಿದರು.

ಸೋಫಿಯ ಸಂಧ್ಯಳಿಗೆ ಫೋನ್ ಮಾಡಿದಳು.



## ಓದುವ



ಸಂಧ್ಯಳ ಅಮ್ಮ : ಹಲೋ... ಯಾರು?

ಸೋಫಿಯಾ : ನಾನು ಸೋಫಿಯಾ.

ಅಮ್ಮ : ಏನು ಮಗು?

ಸೋಫಿಯಾ : ಆಂಟಿ, ಸಂಧ್ಯ ಎಲ್ಲಿ?

ಅಮ್ಮ : ಅವಳಿಗೆ ಜ್ವರ. ಅಪ್ಪನೊಂದಿಗೆ ಆಸ್ಪತ್ರೆಗೆ ಹೋಗಿದ್ದಾಳೆ.

ಸೋಫಿಯ : ಹೌದೇ? ಸಂಜೆ ಶಾಲೆ ಬಿಟ್ಟು ನಿಮ್ಮಲ್ಲಿಗೆ ಬರುತ್ತೇನೆ ಆಂಟೀ...

ಅಮ್ಮ : ಆಗಲಿ ಸೋಫಿ.

## ಬರೆಯುವ

**ಸೋಫಿಯಾ ಮತ್ತು ಅವಳ ಅಮ್ಮನ ನಡುವೆ ನಡೆದ ಸಂಭಾಷಣೆ ಬರೆಯಿರಿ.**



ಸೋಫಿಯ : ಅಮ್ಮಾ ಸಂಧ್ಯ ಬರುವುದಿಲ್ಲ.


ಅಮ್ಮ : ______________________

ಸೋಫಿಯ : ______________________

ಅಮ್ಮ : ಔಷಧಿ ತರಲಿಲ್ಲವೇ?

ಸೋಫಿ : ______________________

ಸಂಜೆ ಶಾಲೆ ಬಿಟ್ಟ ಕೂಡಲೇ ಸೋಫಿಯಾ ಸಂಧ್ಯಳ ಮನೆಗೆ ಹೋದಳು.
"ಸಂಧ್ಯಾ..... ಮಾತ್ರೆ ನುಂಗಿದೆಯಾ? ಈಗ ಜ್ವರ ಕಡಿಮೆಯಾಗಿದೆಯಲ್ಲಾ"
ಸೋಫಿಯ ಸಂಧ್ಯಳ ಹಣೆ ಮುಟ್ಟಿ ನೋಡಿದಳು.
"ಇಲ್ಲ ಸೋಫೀ.... ಡಾಕ್ಟರ್ ಚುಚ್ಚುಮದ್ದು ಚುಚ್ಚಿದ್ದಾರೆ."
"ಸಂಧ್ಯಾ... ನೀನು ವಿಶ್ರಾಂತಿ ತೆಗೆದುಕೋ. ನಾನು ನಾಳೆ ಬರುತ್ತೇನೆ"
ಸೋಫಿಯಾ ತನ್ನ ಮನೆಗೆ ಹೋದಳು.



## ಓದುವ

| | | |
|---|---|---|
| ಪತ್ರಿಕೆ | ಅಂಚೆಕಛೇರಿ | ಕವರು |
| ಮುಂಭಾಗ | ವಿಳಾಸ | ಅಂಚೆಪೆಟ್ಟಿಗೆ |

## ಬರೆಯುವ


| | | |
|---|---|---|
| ಸಂಧ್ಯಾ | ಮಾತ್ರೆ | ಕುಡಿದಳು |
| | ಔಷಧಿ | ನುಂಗಿದಳು |
| ಡಾಕ್ಟರ್ | ಚುಚ್ಚುಮದ್ದು | ಪರೀಕ್ಷಿಸಿದರು |
| | ರೋಗಿಯನ್ನು | ಚುಚ್ಚಿದರು |


ಸಂಧ್ಯಾ ಮಾತ್ರೆ ನುಂಗಿದಳು.




## ಹೇಳುವ

ಕೊಟ್ಟಿರುವ ಚಿತ್ರಗಳನ್ನು ನೋಡಿ ಅವುಗಳ ಹೆಸರು ಬರೆದು ಪ್ರಯೋಜನಗಳನ್ನು ಹೇಳಿರಿ.











## ಹಾಡುವ

### ಸೇವಾ ಸಂಸ್ಥೆಗಳು

ದೇಶದ ಜನರಿಗೆ ನೆರವನು ನೀಡಲು
ಇಲ್ಲಿವೆ ಸೇವಾ ಸಂಸ್ಥೆಗಳು
ವಿಧವಿಧ ಸೇವೆಯ ನೀಡುವ ಇವುಗಳು
ದೇಶದ ಪ್ರಜೆಗಳ ಆಸ್ತಿಗಳು
ವಿದ್ಯೆಯ ಕಲಿಯುತ ಜ್ಞಾನವ ಗಳಿಸಲು
ಎಲ್ಲೆಡೆಯಲ್ಲಿವೆ ಶಾಲೆಗಳು
ಪತ್ರದ ಮೂಲಕ ಮಾಹಿತಿ ವಿನಿಮಯ
ಮಾಡಲು ಅಂಚೆ ಕಛೇರಿಗಳು
ರೋಗವು ಬಂದರೆ ಔಷಧಿ ನೀಡಲು
ದೊರೆವುದು ವೈದ್ಯರ ಸೇವೆಗಳು
ಗಲಭೆಯ ನಿಲ್ಲಿಸಿ ಶಾಂತಿಯ ಕಾಯಲು
ಎಲ್ಲೆಡೆ ಪೊಲೀಸ್ ಠಾಣೆಗಳು
ಊರಿಂದೂರಿಗೆ ಸಾಗಲು ನಮಗಿದೆ
ನೆಲ ಜಲ ಸಾರಿಗೆ ಸೇವೆಗಳು
ವಿವಿಧೆಡೆ ದೊರೆಯುವ ಸೇವೆಗಳನ್ನು
ವಿವೇಕದಿಂದಲೆ ಪಡೆಯೋಣ
ಸೇವಾ ಭಾವನೆ ಬೆಳೆಸುತ ನಾವು
ದೇಶಕೆ ಮಾದರಿ ಆಗೋಣ